# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XX - 5 ಮೇ 2002

ಈ ಸಂಚಿಕೆಯಲ್ಲಿ


ಅಸೋಸಿಯೇಷನ್ನಿನಲ್ಲಿ ರಾಮನವಮಿ ಕಾರ್ಯಕ್ರಮ 2

ಭಾರತೀಯ ಕಲೆ - ಭಾಗ 4
ಕೃಪೆ : ಎನ್. ಮರಿಶಾಮಾಚಾರ್‌ರವರ ಭಾರತೀಯ ಕಲೆ 3

ಸಾಹಿತ್ಯದಲ್ಲಿ ಕೈದಿ • ವಾಸುದೇವ ಕಾಜೆಮಾರ್ 8

Karnataka's Contribution to Indian Bhakti Movement • **Prof. Vasant Kushtagi** 10

Gandhi on Character & Nation Building
excepts from Mahatma Gandhi's writings 13

ಸುತ್ತ-ಮುತ್ತ 14



**The Mysore Association, Mumbai**
393, Bhaudaji Road, Matunga, Mumbai-400 019.
Tel.: 402 46 47 • Grams: "KARUNADU"

# ಅಸೋಸಿಯೇಷನ್ನಿನಲ್ಲಿ ರಾಮನವಮಿ ಕಾರ್ಯಕ್ರಮ

ಶ್ರೀರಾಮನ ಹೆಸರು ಕೇಳದವರೇ ಇಲ್ಲ. ರಾಮಾಯಣದ ಕತೆಯನ್ನು ತಿಳಿಯದವರೇ ಇಲ್ಲ. ''ಅಯ್ಯೋ ರಾಮ'' ''ರಾಮ ರಾಮ'' ''ಆ ರಾಮನೇ ಗತಿ '' ಹೀಗೆ ದಿನದಲ್ಲಿ ಅನೇಕ ಬಾರಿ ಅನೇಕ ಸಂದರ್ಭಗಳಲ್ಲಿ ರಾಮನನ್ನು ನೆನೆಸುತ್ತೇವೆ. ''ಆದರ್ಶ ಪುರುಷ'' ರಾಮ, ಪಿತೃವಾಕ್ಯ ಪರಿಪಾಲಕ ''ಏಕ ಪತ್ನೀ ವ್ರತಸ್ಥ'' ಹೀಗೆ ಅನೇಕ ಗುಣಗಳ ಬಿರುದುಗಳು ರಾಮನಿಗೆ ರಾಮಾಯಣವು ಸದಾಕಾಲ ಚಿರಪಚಿತವಾಗಿದೆ. ರಾಮಾಯಣಕ್ಕೆ ಒಂದ ವರ. ''ಯಾವತ್ತಿನ ವರೆಗೂ ಈ ಭೂಮಿಯ ಮೇಲೆ ಗಿರಿ ನದಿಗಳಿರುತ್ತವೋ ಆವತ್ತಿನ ವರೆಗೂ ರಾಮಾಯಣವು ಪ್ರಚಲಿತದಲ್ಲಿರುತ್ತದೆ'' ಎಂದು. ತ್ರೇತಾಯುಗದಲ್ಲಿ ನಡೆದ ರಾಮಾಯಣವು ಇಂದಿನ ಕಲಿಯುಗದಲ್ಲೂ ಪ್ರಚಾರದಲ್ಲಿರುವುದೇ ಇದಕ್ಕೆ ಸಾಕ್ಷಿ, ಚೈತ್ರ ಶುದ್ಧ ನವಮಿಯಂದು ಶ್ರೀ ರಾಮನ ಜನನವಾದ ದಿನ, ಭಾರತದಲ್ಲಿ ಅನೇಕ ಕಡೆಸುತ್ತಾರೆ, ತ್ಯಾಗರಾಜರ ಆರಾಧ್ಯ ದೈವ ಶ್ರೀರಾಮ ತ್ಯಾಗರಾಜರ ಕೃತಿಗಳೆಲ್ಲಾ ರಾಮನನ್ನು ಕು ತೇ, ಅನೇಕ ಕಡೆಗಳಲ್ಲಿ ರಾಮೋತ್ಸವ ಎಂದು ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಿ 8-10 ದಿನಗಳ ಕಾಲ ನಡೆಸುತ್ತಾರೆ. ನಮ್ಮ ಅಸೋಸಿಯೇಷನ್ನಿನಲ್ಲಿಯೂ 'ರಾಮನವಮಿ'ಯನ್ನು ಆಚರಿಸಲಾಗುತ್ತದೆ. ಎಪ್ರಿಲ್ 21 ಭಾನುವಾರದಂದು ಅಸೋಸಿಯೇಷನ್ನಿನಲ್ಲಿ ರಾಮನವಮಿ ಕಾರ್ಯಕ್ರಮವನ್ನು ನಡೆಸಲಾಯಿತು. ಮಹಿಳಾ ವಿಭಾಗದ ಸದಸ್ಯೆಯರಿಂದ ಭಜನಾ ಕಾರ್ಯಕ್ರಮವನ್ನೇರ್ಪಡಿಸಲಾಗಿತ್ತು. ಹಿರಿಯ ಸದಸ್ಯೆ ಹಾಗೂ ನುರಿತ ಗಾಯಕಿ ಶ್ರೀಮತಿ ಸೀತಮ್ಮ ರಾವ್ ಅವರು ಗಣಪತಿಯ ಸ್ತೋತ್ರದೊಂದಿಗೆ ಭಜನೆಯನ್ನು ಆರಂಭಿಸಿದರು. ನಂತರ ಶ್ರೀಮತಿ ಶ್ಯಾಮಲಾರಾಧೇಶ ಅವರ ನೇತೃತ್ವದಲ್ಲಿ ಸುಮಾರು 45 ನಿಮಿಷಗಳ ಕಾಲ ರಾಮನ ಕುರಿತು ಅನೇಕ ರಚನೆಗಳನ್ನು ಹಾಡಿದರು. ನಂತರ ಶ್ರೀ ರಾಮ ದೇವರಿಗೆ ಪೂಜೆ, ಮಂಗಳಾರತಿ ಹಾಗೂ ಸಾಂಪ್ರದಾಯಿಕ ರೀತಿಯ ಪ್ರಸಾದ ವಿತರಣೆಯೊಂದಿಗೆ ಕಾರ್ಯಕ್ರಮವು ಮುಗಿಯಿತು.

FOR ALL YOUR DOMESTIC AND INTERNATIONAL TRAVEL ARRANGEMENTS

CONTACT

AUGUST TRAVEL SERVICE

Agents For INDIAN AIRLINES & JET AIRLINES

REGD. OFFICE :
3/15, ASHIANA, SECTOR 17,
VASHI, NAVI MUMBAI
PHONES : 789 1970 * 789 1972
789 2451
GRAMS : AUGTRASERV

ALSO AT :
2/16, KABBUR HOUSE,
SION (E), MUMBAI-400 022.
PHONES : 407 2984 * 409 3573
407 7750

TRIMURTI JEWELLERS

GOLD AND DIAMOND ORNAMENTS

460/4, Venkatesh Niwas,
Ground Floor,
Bhaudaji Road,
Opp Mysore Association,
Matunga (C.Rly.)
Mumbai-400 019.

Phone : **402 34 85**

## FORTHCOMING PROGRAMMES AT THE ASSOCIATION

On 15th May 2002

### AKSHAYA TRITIYA MAHA GANAPATI POOJA

5.00 P.M. Ganapati Pooja & Ganapati Homa

6.00 P.M. Navagraha Pooja & Navagraha Homa

7.00 P.M. Poornahuti, Naivedyan

8.00 P.M. Maha Mangalarathi, Mantrapushpam

8.30 P.M. Prasada Vinayogam

***All are cordially invited.***

## MATRIMONIAL

Alliance invited for Kannada Smartha bramhin boy 28, 5.9", Haritsa gotra Shravana Nakshatra. Having Software Consultancy & Manufacturing business with the turnover of 80 lacs.

Looking for Enterprize graduate. Well qualified. Contact Mr. Swamy 022 - 6327373, 9821154453 or 0821-544537.

Email: nns74@yahoo.com
8.12 Vishka Apartments
Newlink Road, Andheri (W),
Opp Lotus Petrol Pump,
Mumbai-400 053.

# ಭಾರತೀಯ ಕಲೆ

ಭಾಗ - 4

ಭಾರತದಲ್ಲಿ ಚಿತ್ರಕಲೆ ಹಾಗೂ ಶಿಲ್ಪಕಲೆಗಳು ಬಹಳ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿವೆ. ವಿವಿಧ ಪ್ರಾಂತಗಳಲ್ಲಿ ವಿವಿಧ ಶೈಲಿಗಳು ಬೆಳೆದು ಬಂದಿವೆ. ಓದುಗರಿಗೆ ಭಾರತೀಯ ಕಲೆಯ ಒಂದು ದರ್ಶನವನ್ನು ನೀಡಲು ನಾವು ಶ್ರೀ ಎನ್. ಮರಿಶಾಮಾಚರ್ ಅವರು ಬರೆದಿರುವ ಭಾರತೀಯ ಕಲೆ ಎಂಬ ಪುಸ್ತಕದಿಂದ ಆಯ್ದ ಭಾಗಗಳನ್ನು ನೇಸರುವಿನಲ್ಲಿ ಪ್ರಕಟಿಸುತ್ತಿದ್ದೇವೆ. ಸ್ವತಃ ಕಲಾವಿದ, ಶಿಲ್ಪಿ, ಛಾಯಾಗ್ರಾಹಕರಾಗಿರುವ ಮರಿ ಶಾಮಾಚಾರ್‌ರು ಕಲೆಯ ಕ್ಷೇತ್ರದಲ್ಲಿ ಬಹುಮುಖ ಸೇವೆಯನ್ನುಸಲ್ಲಿಸಿದ್ದಾರೆ ಮತ್ತು ಕಲಾಚಟುವಟಿಕೆಗಳಿಗೆ ಸ್ಫೂರ್ತಿ ತಂದಿದ್ದಾರೆ.

*(...ಕಳೆದ ಸಂಚಿಕೆಯಿಂದ)*

**ಕೋಟಾ**

ರಾಜಸ್ಥಾನಿ ಚಿತ್ರಕಲೆಯ ಕೊನೆಯ ಹಂತವು ಕೋಟಾದ ಗುಡ್ಡಗಳ ನಡುವೆ ರಚಿಸಲಾಗಿದೆ. ಇಲ್ಲಿ ಮಾತ್ರ ಭಾರತೀಯ ಚಿತ್ರಕಲೆಯಲ್ಲಿ ಬೇಟೆಯ ಭಾವೋದ್ರೇಕದ ಚಿತ್ರಣವನ್ನು ಪ್ರತಿನಿಧಿಸುತ್ತದೆ. ಕೋಟಾದ ರಾಜ ಉಮ್ಮೇದ್ ಸಿಂಗನೆಂಬುವನು ರಾಜ



*ರಾಜಸ್ಥಾನಿ - ಕೋಟಾ*

ಪ್ರತಿನಿಧಿಯಾದ ಜಾಲಿಮ್ ಸಿಂಗ್ ಕೈಗೊಂಬೆಯಾಗಿದ್ದು, ಹತ್ತು ವರ್ಷದ ಸಣ್ಣ ಹುಡುಗನಾಗಿದ್ದಾಗಿನಿಂದ ಈತ ತನ್ನ ಸಮಯವನ್ನೆಲ್ಲಾ ಬೇಟೆಯಾಡುವುದಕ್ಕೆ ಸಮರ್ಪಿಸಿದ್ದ. ಕೋಟಾದ ಚಿತ್ರಗಳಲ್ಲಿ ಈ ಬೇಟೆಯ ಬಗ್ಗೆ ಅತಿಯಾದ ಪ್ರೀತಿಯನ್ನು ತೋರಿಸುವುದಲ್ಲದೆ ೧೮ನೇ ಶತಮಾನದ ಇಂಗ್ಲೆಂಡಿನಲ್ಲಿ ಇದಕ್ಕೆ ಸಮನಾದ ನರಿಬೇಟೆಯು ಸಾಮಾಜಿಕ ಪದ್ಧತಿಯಾಗಿಬಿಟ್ಟಿತು. ಅರಮನೆಯ ಹೆಂಗಸರೂ ಬೇಟೆಯಾಡುತ್ತಿದ್ದು, ಸರಿಯಾಗಿ ಗುರಿಯಿಟ್ಟು ಹೊಡೆಯುವುದದರಲ್ಲಿ ನುರಿತರಾಗಿದ್ದರು. ಪ್ರಪಂಚದ ಚಿತ್ರಕಲಾ ಜಗತ್ತಿಗೆ ಕೋಟಾ ಕಲಾವಿದರು ನೀಡಿದ ಕಾಣಿಕೆ ಅದ್ವಿತೀಯ. ಆ ಕಾಲದ ಪ್ರಮುಖ ವಸ್ತುವೆಂದರೆ ಕಾಡು ಹಾಗೂ ಮೃಗಗಳು. ರಾಜಸ್ಥಾನದ ಪ್ರೇಮ ಚಿತ್ರಣವು ಸರಳ ಹಾಗೂ ದೃಢವಾದ ಆಕಾರಗಳಿದ್ದು ಮೊಗಲರ ವಿವರಾತ್ಮಕ ಪ್ರೇಮ ಚಿತ್ರಣಕ್ಕಿಂತ ಭಿನ್ನವಾಗಿದೆ. ಇದನ್ನು ನಾವು ಕಾಡಿನ ಮರ - ಗಿಡಗಳು, ಬೇಟೆಗಾರರು ಹಾಗೂ ಪ್ರಾಣಿಗಳ ರಚನೆಯಲ್ಲೂ ಕಾಣಬಹುದು. ಈ ಕಲಾವಿದರು ಅಳವಡಿಸಿರುವ ಆಕೃತಿಗಳಿಗೆ ಯಾವುದೇ ಸಾಂಕೇತಿಕ ಅರ್ಥಗಳಿಲ್ಲ. ಕಾಡೆಮ್ಮೆ ಹಾಗೂ ಹುಲಿಗಳ ಸಾವು ಬದುಕುಗಳ ವೃತದಲ್ಲಿ ಬಂಧಿತರಾಗಿ ಹೋರಾಡುತ್ತಿರುವ ದೃಶ್ಯದಲ್ಲಿ ಒಂದು ನಿಗೂಢ ಮೌನದ ಪರಿಸರವಿದೆ.

19ನೇ ಶತಮಾನದಲ್ಲಿ ಈ ದೃಢ ಸ್ಪಷ್ಟತೆಯ ಹೆಚ್ಚು ಸೂಕ್ಷ್ಮ ಬದಲಾವಣೆಯನ್ನು ಆಕೃತಿಗಳಲ್ಲಿ ಕಾಣಬಹುದು. ಅದಲ್ಲದೆ ಜಹಂಗೀರನ ಸಮಯದಲ್ಲಿ ಈ ಕಾಡಿನ ಮರಗಿಡಗಳನ್ನು ಚಿತ್ರಿಸುವ ಹುಮ್ಮಸ್ಸನ್ನೂ ನೋಡಬಹುದು. ರಾಜಸ್ಥಾನದ ಚಿತ್ರಕಲೆಯು, ಪ್ರಕೃತಿಯನ್ನು ಚಿತ್ರಿಸುವಲ್ಲಿ ಆಸಕ್ತಿ ವಹಿಸಿ, ಅಪ್ಪಟ ಭಾರತೀಯವಾದ ಸೃಷ್ಟಿ ತನ್ಮಯತೆಯನ್ನು ಬಿಂಬಿಸುತ್ತದೆ.

**ಪಹಾರಿ**

'ಪಹಾರಿ' ಎಂಬ ಪದವು ಪಂಜಾಬಿನ ಐದು ನದಿಗಳನ್ನೊಳಗೊಂಡ ಪರ್ವತ ಶ್ರೇಣಿಯ ಸ್ಥಳವೆಂದು ತಿಳಿಸುತ್ತದೆ. ಈ ಜಾಗವು ಒಬ್ಬ ಪಾಳೇಗಾರನ ನಾಯಕತ್ವದ ಕೆಳಗೆ ಹಲವಾರು ಬಿಡಿ ಭಾಗಗಳಾಗಿ ವಿಂಗಡಿಸಲಾಗಿದೆ. 'ಪಹಾರಿ ಚಿತ್ರಕಲೆ, ಹೀಗಾಗಿ ಈ



*ಪಹಾರಿ*

ಎಲ್ಲಾ ರಾಜ್ಯಗಳ ಕಲಾಕೃತಿಗಳನ್ನು ಒಳಗೊಂಡಿದ್ದಲ್ಲದೆ ಈ ಎಲ್ಲದರ ಚೈತನ್ಯದ ಪ್ರತಿನಿಧಿಯಾಗಿದೆ. 'ಬಸೋಲಿ, ಗುಲೇರ್, ಜಮ್ಮು, ಕಾಂಗ್ರ ಹಾಗೂ ಗಾರ್ಹವಲ್, ಪಹಾರಿ ಚಿತ್ರಕಲೆಗಳ ದಿನಾಂಕ, ಮೂಲ, ನಿಖರವಾಗಿ ಏನೂ ಹೇಳಲಾಗುವುದಿಲ್ಲ. ಪರಿಣಿತ ಸಂಶೋಧನೆಯ ಪ್ರಕಾರ ಪಹಾರಿ ಕುಸರಿ ಚಿತ್ರಕಲೆ ಒಂದು ಸೃಜನಶೀಲತೆಯ ಸಮೂಹವಾಗಿದೆ, ಗುಜರಾತಿನ ಹಸ್ತಪ್ರತಿಗಳ ನಿದರ್ಶನಗಳ ಶೈಲಿ, ಔರಂಗಜೇಬು ಕಾಲದ (೧೬೫೮-೧೭೦೭) ಮೊಗಲರ ಶೈಲಿ, ೧೬ನೇ ಶತಮಾನದ ಸಾಂಪ್ರದಾಯಿಕ ಗುಜರಾತಿ ಹಸ್ತಪ್ರತಿಗಳ ನಿದರ್ಶನ ಅಕ್ಬರ್, ಜಹಂಗೀರ್ ಹಾಗೂ ಷಹಜಹಾನ್ ಶೈಲಿಗಳ ಪ್ರಭಾವದ ಫಲವಾದ ರಾಜಸ್ಥಾನಿ ಶೈಲಿಯ ಒಟ್ಟುಗೂಡಿಕೆಯಾಗಿದೆ. ಇದಕ್ಕೆ ಬಹುಮಟ್ಟಿಗೆ ಐತಿಹಾಸಿಕ, ಜಾನಪದದ ಪ್ರಭಾವವು ಸೇರಿವೆ. ಹಾಗೂ ಇದರಿಂದ ಸಮೃದ್ಧ ಅಭಿವ್ಯಕ್ತಿಯ ಶಕ್ತಿಯನ್ನು ಪಡೆದು ಈ ಶೈಲಿಯು ಉತ್ತಮ ತಾಂತ್ರಿಕತೆಯನ್ನು ಹೊಂದಿರುವ ಶೈಲಿಯೆನಿಸಿಕೊಂಡಿದೆ.

ಔರಂಗಜೇಬನು ಕಲೆಗಳ ಮೇಲೆ ಹೊರಡಿಸಿದ ನಿಷೇದಾಜ್ಞೆಯ ಫಲವಾಗಿ ಹಿಂದೂ ನಾಯಕರ ಕೆಳಗೆ ಕೆಲಸ ಮಾಡುತ್ತಿದ್ದ ಅನೇಕ ಸ್ಥಳೀಯ ಕಲಾವಿದರು ಬೆಟ್ಟದ ತಪ್ಪಲಿಗೆ ಆಶ್ರಯ ಪಡೆಯಲು ಹೋದರು. ಹೀಗೆ ಹೋದ ಜನರೆಲ್ಲಾ ಒಟ್ಟುಗೂಡಿ ಸಣ್ಣದಾದ ಆದರೆ ಮುಖ್ಯವಾದ ಬಸ್ಸೋಲಿ ಪ್ರಾಂತ್ಯವನ್ನು ಸಂಗ್ರಾಮ್ ಪಾಲನ (೧೬೩೫-೧೬೭೩) ಆಳ್ವಿಕೆಯ ಕೆಳಗೆ ಪ್ರಾರಂಭಿಸಿಕೊಂಡರು. ಈಗಾಗಲೆ ಅವನತಿಗೊಂಡ ಮೊಗಲರ ಶೈಲಿಯನ್ನು ಕೈಬಿಟ್ಟು, ತಮ್ಮದೆ ಆದ ಬಣ್ಣಗಳ ಮೋಹದಲ್ಲಿ ಬಸ್ಸೋಲಿ ಕಲಾವಿದರು. ತಮಗೆ ಇಷ್ಟವಾದ ವಸ್ತುಗಳನ್ನು ಕುರಿತು ಹೊಸ ಅಭಿವ್ಯಕ್ತಿಯ ಸರಣಿಗಳನ್ನು ಪುನರ್ ಸೃಷ್ಟಿಸಿದರು.

**ದೈಹಿಕ ಆಕರ್ಷಣೆ**

ಜಮ್ಮು ಶೈಲಿಯ ಸ್ಪಷ್ಟತೆ, ಸರಳತೆ ಹಾಗೂ ನಿಖರವಾದ ವೈಯಕ್ತಿಕತೆ, ಸುಮಧುರ ಲಯಗಳನ್ನು ಹೊಂದಿರುವ ಕಾಂಗ್ರಾ ಶೈಲಿ ಹಾಗೂ ತನ್ನ ಸಂಗೀತದಲ್ಲಿ ತಲ್ಲೀನರಾಗಿರುವ, ಪ್ರೇಮದ ಮಾಧುರ್ಯ, ಮುಳುಗಿದ ಸುಂದರ ಸ್ತ್ರೀಯರು ಹಾಗೂ ಕೊನೆಯದಾಗಿ ರೇಖಾಲಾಲಿತ್ಯದ ಪೂರ್ಣತೆಯನ್ನು ಪಡೆಯುತ್ತದೆ. ಆಕೃತಿಗಳ ಮರ ಹಾಗೂ ಭೂದೃಶ್ಯಕ್ಕೂ ಸೂಕ್ಷ್ಮತೆಯಿದ್ದು ಪ್ರತಿಯೊಂದು ಇನ್ನೊಂದರ ಜೊತೆ ಮಾತನಾಡುತ್ತ ಪ್ರೇಮವನ್ನು ಸಾರುತ್ತವೆ.

**ಬಸ್ಸೋಲಿ**

ಬಸ್ಸೋಲಿ ಎಂಬುದು ಜಮ್ಮು ಸೀಮೆಯೊಳಗೆ ಸೇರುವ ಇಂದಿನ ಜಮ್ಮು ಮತ್ತು ಕಾಶ್ಮೀರ ರಾಜ್ಯದ

ಭಾಗವಾಗಿದ್ದು ಇಂದು ಈ ಊರು ಪಹಾರಿ ಶೈಲಿಯ ಚಿತ್ರಕಲೆಯ ಹುಟ್ಟೂರೆಂದು ಒಪ್ಪಿಕೊಳ್ಳಲಾಗಿದೆ. ಪಹಾರಿ ಚಿತ್ರಕಲಾ ಶೈಲಿಯ ೧೭ನೇ ಶತಮಾನದಲ್ಲಿ ತನ್ನದೇ ಆದ ಕುಸುರಿ ಚಿತ್ರಕಲೆಯನ್ನು ಬೆಳೆಸಿಕೊಂಡು ಬೇರೆ ರಾಜ್ಯಗಳಿಗೂ ಹರಡಿಕೊಂಡಿತು. ಬಸ್ಸೋಲಿ ಶೈಲಿಯು ಆಳವಾಗಿ ಬೇರೂರಿದ ಜಾನಪದ ಹಾಗೂ ಮೊಗಲರ ಮೂಲ ಅಂಶಗಳ ಬೆಸೆಯುವಿಕೆಯ ಫಲವಾಗಿದೆ. ಸಂಗ್ರಾಮ ಪಾಲನ ಆಳ್ವಿಕೆಯಲ್ಲಿ (೧೬೩೫-೧೬೭೩) ಬಸ್ಸೋಲಿಯ ರಾಜ ಮನೆತನವು ವೈಷ್ಣವ ಧರ್ಮವನ್ನು ಅನುಸರಿಸಿತು. ಬಹುಶಃ ಷಾಹಜಹಾನ್ ಕಾಲದಲ್ಲಿ ದೆಹಲಿಯನ್ನು ಭೇಟಿ ಮಾಡಿದ ಸಂಗ್ರಾಮ ಪಾಲನು ಮೊಗಲ ಕಲಾವಿದರ ಸಂಪರ್ಕವನ್ನು ಪಡೆದನು. ಬಸ್ಸೋಲಿ ಉಪಯೋಗಿಸಿದ್ದರೂ, ಇವೆರಡು ರಾಜ್ಯಗಳ ಸಂಪರ್ಕಕ್ಕೆ ಯಾವುದೇ ಐತಿಹಾಸಿಕ ಪುರಾವೆಗಳಿಲ್ಲ.

೧೬೬೦ - ೭೦ರ ಆರಂಭಿಕ ಚಿತ್ರಗಳಲ್ಲಿ ಶೈವಧರ್ಮಕ್ಕೆ ಮತಾಂತರ ಹೊಂದಿದಾಗ ಅನುಭವಿಸಿದ ಘರ್ಷಣೆಯನ್ನು ಪ್ರತಿಬಿಂಬಿಸುತ್ತದೆ. ಕೆಲವು ಚಿತ್ರಗಳು ದೇವ ಅಥವ ಪಾರ್ವತಿಯನ್ನು ಚಿತ್ರಿಸಿದ್ದರೆ, ಪ್ರಮುಖ ಸರಣಿಯು ರಸಮಂಜರಿಯನ್ನು ಚಿತ್ರಿಸುತ್ತದೆ. ಇದು ಐಹಿಕ ಪ್ರೇಮವನ್ನು ಬಿಂಬಿಸುತ್ತಿರುವಂತಿದ್ದರೂ ಇದರಲ್ಲಿನ ನಾಯಕನನ್ನು ಕೃಷ್ಣನಿಗೆ ಹೋಲಿಸಲಾಗಿದೆ. ಇಲ್ಲಿ ಧರ್ಮದ ಬಗ್ಗೆ ಇರುವ ಒಲವಿನ ಜೊತೆಗೆ ಈ ಸರಣಿಯು ಬಸ್ಸೋಲಿ ಚಿತ್ರಕಲೆಯ ಎಲ್ಲಾ ಗುಣಲಕ್ಷಣವನ್ನು ಎತ್ತಿಹಿಡಿಯುತ್ತದೆ. ಸತ್ವಯುತವಾಗಿದ್ದರೂ, ಈ ಶೈಲಿಯ ನಂತರ ಬಂದ ಕಾಂಗ್ರಾ ಕಲಾವರ್‌ನಲ್ಲಿರುವ ಕುಶಾಗ್ರವಾಗಲಿ ಅಥವ ಸಂಕೀರ್ಣತೆಯಾಗಲಿ ಇಲ್ಲ. ಅದರಲ್ಲಿ ಉಪಯೋಗಿಸಲಾದ ಪ್ರಬಲವಾದ ಉಜ್ವಲ ಬಣ್ಣಗಳು ಐಹಿಕ ಹಾಗೂ ಪಾರಮಾರ್ಥಿಕ ವಿಷಯಗಳ ಬಗ್ಗೆ ಅವರಿಗಿದ್ದ ಆಸಕ್ತಿಯನ್ನು ಸೂಚಿಸುತ್ತದೆ. ಹೊರ ರೇಖೆಯಲ್ಲಿ ಉಪಯೋಗಿಸಲಾದ ಕಡುಕೆಂಪು ಬಣ್ಣದ ಭಾವೋದ್ವೇಗದ ಪ್ರತೀಕವಾಗಿದೆ. ಕೆಲವು ಬಾರಿ ಅದು ಹಳದಿ ಅಥವಾ ನೀಲಿ ಬಣ್ಣವನ್ನು ಉಪಯೋಗಿಸಲಾಗಿದೆ. ಹಲವಾರು ಚಿತ್ರಗಳಲ್ಲಿ ದೃಶ್ಯದ ಒಂದು ಭಾಗವು ಚಿತ್ರದ ಹೊರ ರೇಖೆಯಲ್ಲಿ ಒಂದಾಗಿಬಿಡುತ್ತದೆ. ಕೆಲವು ಬಾರಿ ಸಂಸ್ಕೃತದ ಪಠ್ಯಗಳಿಂದ ಆರಿಸಿಕೊಳ್ಳಲಾದ ಭಾಗಗಳನ್ನು ಉಪಯೋಗಿಸಲಾಗಿದೆ.

ಒಂಟಿ ಮರ ಅಥವಾ ಅಂಗಗಳ ಆಕೃತಿಯನ್ನು ಬಿಟ್ಟರೆ ಚಿತ್ರವು ಕೆಂಪು, ಹಳದಿ, ನೀಲಿ, ಕೇಸರಿಗಳ ಉಜ್ವಲ ಬಣ್ಣಗಳ ದೊಡ್ಡ ಹರವಿನ ಮೇಲೆ ಮಾಡಲಾಗಿದೆ. ದಿಗಂತವನ್ನು ಎತ್ತರದಲ್ಲಿ ಇಡಲಾಗಿದೆ. ಕಿರಿದಾದ ನೀಲಿ ಪಟ್ಟಿಯ ಮೇಲೆ ಚುಕ್ಕೆಯಂತಹ ಮೋಡಗಳು, ಆಕಾಶವನ್ನು ತೋರಿಸುತ್ತದೆ. ವಿಶೇಷವಾಗಿ ಮುಖದ ಆಕೃತಿಯ ರೀತಿಯ ಬಸ್ಸೋಲಿ ರೀತಿಯನ್ನು ಪ್ರತ್ಯೇಕಿಸುತ್ತದೆ, ಎತ್ತರದ ಉದ್ದನೆಯ ಮೂಗು ಹಾಗೂ ಹಣೆಯು ಒಂದೇ ಸಾಲಿನಲ್ಲಿದೆ. ಕಮಲದಂತಹ ಕಣ್ಣುಗಳು ನೋಟದ ತೀವ್ರತೆಯಲ್ಲಿ ಹೊರ ಇಣುಕಿದಂತೆ ಕಾಣುತ್ತದೆ.

ಆಕೃತಿಯಲ್ಲಿ ಮುಖ್ಯವಾದ ಮೂರು ಭಿನ್ನತೆಗಳಿವೆ. ಮೊದಲನೆಯದಾಗಿ ಮಧುರವಾದ ಆದರೆ ತೀವ್ರ, ತೀಡಿದಂತಹ ಮುಖರೇಖೆ, ಎರಡನೆಯದಾಗಿ, ಮೊಗಲರ ಶೈಲಿಯ ವಸ್ತ್ರಾಲಂಕಾರ ಮೂರನೆಯದಾಗಿ, ಹೆಚ್ಚು ಎದ್ದು ಕಾಣುವಂತಹ ತಲೆಯ ಹಿಂದಿನ ಆಕಾರವು ಉಬ್ಬಿರುವಂತಹ ರೀತಿ. ಸ್ತ್ರೀಯರು ಕೆಲವೊಮ್ಮೆ ರಜಪೂತರ ಗಾಗ್ರ (ಲಂಗ) ಚೋಲಿ (ಕುಪ್ಪಸ) ಹಾಗೂ ಒಡನಿ (ಧಾವಣಿ)ಯನ್ನು ಧರಿಸುತ್ತಾರೆ. ಒಮ್ಮೊಮ್ಮೆ ಮೊಗಲರ ಕಾಲದಲ್ಲಿದ್ದಂತಹ ಸಲ್ವಾರ್ (ಬಿಗಿ ಪೈಜಾಮ), ಚೋಲಿಯು ಎದೆಯ ಸುತ್ತ ಕಟ್ಟಿಕೊಳ್ಳುವ ಮೇಲುವಸ್ತ್ರವನ್ನು ಧರಿಸುತ್ತಾರೆ. ಇಲ್ಲಿ ಮಿಕ್ಕ ಬಟ್ಟೆ ಮುಂಗೈನವರೆಗೂ ಬರುವಂತೆ ಬಿಡಲಾಗುತ್ತದೆ. ಇದು ಷಹಜಹಾನ್ ಹಾಗೂ ಔರಂಗಜೇಬನ ಕಾಲದಲ್ಲಿ ಆಚರಣೆ ಯಲ್ಲಿತ್ತು. ವಾಸ್ತುಶಿಲ್ಪ ಹೆಚ್ಚು ಅಕ್ಬರನ ಕಾಲವನ್ನು ಹಾಗೂ ರಾಜಸ್ಥಾನದ ಶೈಲಿಯನ್ನು ಹೋಲುತ್ತದೆ. ಒಳಮನೆಯಲ್ಲಿ ಬಿಳಿ ಹಾಗೂ ನೀಲಿ ಬಣ್ಣದ ಮಣ್ಣಿನ ಕುಡಿಕೆಗಳು, ಬಂಗಾರದ ಪಾತ್ರೆಗಳು, ಹೂಕುಂಡಗಳು ಹಾಗೂ ಹುಕ್ಕಾ, ಮಧು ಪಾತ್ರೆಗಳನ್ನು ಉಪಯೋಗಿಸಲಾಗುತ್ತಿತ್ತು. ಸಣ್ಣ ಮೇಜು ಹಾಗೂ ಮಂಚವನ್ನು ಬಿಟ್ಟರೆ ಬೇರೆ ಯಾವ ಪೀಠೋಪಕರಣಗಳೂ ಇರಲಿಲ್ಲ.

ಬಸ್ಸೋಲಿ ಚಿತ್ರದಲ್ಲಿನ ಆಕೃತಿಗಳು ಹೇರಳವಾಗಿ ಆಭರಣಗಳನ್ನು ಧರಿಸುವ ಕಾರಣದಿಂದ ಚಿತ್ರಗಳಿಗೆ ಆಭರಣದ ಮೈವಳಿಕೆ ಕಾಣುತ್ತದೆ. ಮುತ್ತುಗಳು ಧರಿಸುತ್ತಿದ್ದು ಅವನ್ನು ಬಿಳಿ ಬಣ್ಣದ ಪಚ್ಚೆಗಳನ್ನು ತೋರಿಸಲು ಬಸ್ಸೋಲಿ ಕಲಾವಿದರು ಜೀರುಂಡೆಯ ಹಸಿರು ರೆಕ್ಕೆಗಳನ್ನು ಬಳಸಿದರೆ. ಇದಕ್ಕೆ ಒಂದು ರೀತಿಯ ಹೊಳಪಿದ್ದು, ಇಂದಿನವರೆಗೂ ಅದು ಉಳಿದುಕೊಂಡು ಬಂದಿದೆ.

ಬಸ್ಸೋಲಿ ರಾಜನ ರಾಜ ವಂಶಜನಾದ ಷಾಹ್ಹಾ ಕುಂಜ್ ಲಾಲ್ ಎಂಬುವನು ಜಮ್ಮುವಿನಲ್ಲಿರುವ ದೊಗ್ರಾ ಆರ್ಟ್ ಗ್ಯಾಲರಿಗೆ ಮೇಲೆ ಹೇಳಲಾದ ಸ್ಥಳದಲ್ಲಿ ಸಿಕ್ಕ ರಸಮಂಜರಿ ೫ ಚಿತ್ರಗಳ ಸರಣಿಯನ್ನು ಕೊಟ್ಟಿದ್ದಾನೆ. ಇದು ಬಹಳ ಮುಖ್ಯವಾದ ಸರಣಿ. ಏಕೆಂದರೆ ಚಿತ್ರದ ಕಾಲ ಹಾಗೂ ಮೂಲಗಳು ತಿಳಿದಿದೆ. ಈ ಚಿತ್ರ ಸರಣಿಯ ಮಿಕ್ಕ ಚಿತ್ರಗಳು ಬೇರೆ ಮ್ಯೂಸಿಯಮ್‌ಗಳು ಹಾಗೂ ಖಾಸಗಿ ಸಂಗ್ರಹಗಳಲ್ಲಿವೆ. ಈ ಚಿತ್ರ ಸರಣಿಯ ಮಿಕ್ಕ ಚಿತ್ರಗಳು ಬೇರೆ ಮ್ಯೂಸಿಯಮ್‌ಗಳು ಹಾಗೂ ಖಾಸಗಿ ಸಂಗ್ರಹಗಳಲ್ಲಿವೆ. ಉದಾಹರಣೆಗೆ ಈ ಚಿತ್ರ ಸರಣಿಯ ಒಂದು ಚಿತ್ರವು ದಿ ವಿಕ್ಟೋರಿಯಾ ಆಂಡ್ ಆಲ್ಬರ್ಟ್ ಮ್ಯುಸಿಯಮ್, ಲಂಡನ್‌ನಲ್ಲಿ ಇದೆ. ಈ ಚಿತ್ರದ ಶೀರ್ಷಿಕೆ 'ಜಾಣೆ ರಾಧ' ಚಿತ್ರದ ಮೇಲ್ಭಾಗದಲ್ಲಿ ಟಾಕ್ರಿ ಲಿಪಿಯಲ್ಲಿ 'ಕ್ರಿಯಾ ವಿದ್ಗಧಾ' ಚಿತ್ರದ ಹಿಂದೆ ರಸಮಂಜರಿಯಿಂದ ತೆಗೆದುಕೊಳ್ಳಲಾದ ಸಂಸ್ಕೃತ ಕಾವ್ಯದ ಸಾಲುಗಳ ಅರ್ಥ: ಆಕೆಯ ಗಂಡ ಸೇವಕಿಗೆ ಯಾವ ಮರದ ಕೆಳಗೆ ಆಕೆ ತನ್ನ ಪ್ರಿಯತಮನನ್ನು ಸಂಧಿಸುತ್ತಿದ್ದಳೋ, ಅದನ್ನು ಕಡಿದು ಹಾಕಲು ಹೇಳಿದ್ದಾನೆ, ಆದರೆ ಆಕೆ ಆ ಕೊಡಲಿಯನ್ನು ಕೊಳದಲ್ಲಿ ಬಿಸಾಡುತ್ತಾಳೆ, ಈ ಸಾಲುಗಳಲ್ಲಿ ಕೃಷ್ಣನ ಹೆಸರನ್ನು ಪ್ರಸ್ತಾಪಿಸಿಲ್ಲದಿದ್ದರೂ, ಎಲ್ಲಾ ಕಲಾವಿದರೂ ಮಿಕ್ಕ ಸರಣಿಯ ಚಿತ್ರಗಳಲ್ಲಿರುವಂತೆ ಕೃಷ್ಣನೆ ಅವಳನ್ನು ಅವಳ ಗಂಡ ತೆರಳಿದ ನಂತರ ಭೇಟಿ ಮಾಡಲು ಬರುತ್ತಾನೆಂದು ತಿಳಿದುಕೊಳ್ಳುತ್ತಾರೆ. ಹಾಗೂ ಆಕೆಯೇ ರಾಧಳೆಂದು ತಿಳಿಯುತ್ತಾರೆ, ಚಿತ್ರದ ಬಲ ಭಾಗದಲ್ಲಿ ಗುಡಾಣವಿದ್ದು, ಅದರ ಗುಹೆ ತಿಳಿಬೂದಿ ಬಣ್ಣವಾಗಿದ್ದು, ಕೆಂಪು ಬಣ್ಣದ ಅಂಚಿನಿಂದ ಕೂಡಿದೆ.

'ಜಿಂಕೆಯ ಹಿಂಡು ಮತ್ತು ಮಹಿಳೆ' ಚಿತ್ರದಲ್ಲಿ ಹಳದಿ - ಹಸಿರು ಹಿನ್ನಲೆಯಲ್ಲಿ ತೋಟದ ದೃಶ್ಯವಿದೆ, ಕಿರಿದಾದ ನೀಲಿ ಹಾಗೂ ಬಿಳಿ ಆಕಾಶದ ಪಟ್ಟಿಯ ಕೆಳಗೆ ಕೊಂಬೆಗಳ ತುಂಬ ಗುಲಾಬಿ ಹೂಗಳನ್ನು ಹೊತ್ತ ಮೂರು ಮರಗಳು, ಬಿಗಿಯಾದ ಮೊಗಲ ಶೈಲಿಯ ಪೈಜಾಮವನ್ನು, ಪಾರದರ್ಶಕವಾದ ತೆಳು ಮೇಲಂಗಿ ಹಾಗೂ ತಿಳಿ ನೀಲಿ ದಾವಣಿ ತೊಟ್ಟ ಸ್ತ್ರೀಯೊಬ್ಬಳ ಕಡೆಗೆ ಬಗ್ಗಿವೆ. ಆ ಸ್ತ್ರೀಯು ತನ್ನ ಬಲಗೈಯಲ್ಲಿ ಒಂದು ಕರವಸ್ತ್ರವನ್ನು ಹಿಡಿದಿದ್ದು ತನ್ನ ಎಡಗೈಯಲ್ಲಿ ಹುಲ್ಲಿನ ಗರಿಕೆಯೊಂದನ್ನು ಹಿಡಿದಿದ್ದಾಳೆ. ಅವಳ ಹಿಂದೆ ನಿಂತ ಸೇವಕಿ ನವಿಲಿನ ಪುಕ್ಕಗಳಿಂದ ಮಾಡಲಾದ ಬೀಸಣಿಕೆ ಹಾಗೂ ಗುಲಾಬಿ ನೀರಿನ ಶೀಶೆಯನ್ನು ಹಿಡಿದಿದ್ದಾಳೆ. ಎಡಭಾಗದಲ್ಲಿ ಒಂದು ಜೊತೆ ಜಿಂಕೆಗಳು, ಕಪ್ಪು ಮೊಲ, ಪುಟ್ಟ ಜಿಂಕೆ ಮರಿ ತನ್ನ ಕತ್ತನ್ನು ಆಕೆಯ ಕಡೆ ಚಾಚಿ ಬರುತ್ತಿದೆ. ಕೊಳದಲ್ಲಿರುವ ಜಲ, ಪಕ್ಷಿಗಳು, ಕಮಲಗಳು, ಮೊಗ್ಗು ಹಾಗೂ ಎಲೆಗಳು ಚಿತ್ರದ ಮುನ್ನೆಲೆಯಾಗಿದೆ.

ಸುಮಾರು ೧೭೭೫ರಲ್ಲಿ ಪ್ರಾರಂಭಿಸಲಾದ ಭಾಗವತ ಪುರಾಣದ ಸರಣಿಯನ್ನು ಬಹುಶಃ ಮುಗಿಸಲಾಗಲಿಲ್ಲವೇನೋ, 'ವಿಷ್ಣುವನ್ನು ಪ್ರಾರ್ಥಿಸುತ್ತಿರುವರ ಧರೆ' ದೃಶ್ಯದಲ್ಲಿ ಇನ್ನೊಂದು ರೀತಿಯ ಸ್ತ್ರೀ ಆಕೃತಿಯು ಕಾಣಿಸುತ್ತದೆ. ಎತ್ತರವಾದ, ತೆಳ್ಳಗಿರುವ ಹಾಗೂ ಬಾದಾಮಿ ಮೈಬಣ್ಣದ, ಮೊಗಲ್

ಶೈಲಿಯ ಉಡುಪನ್ನು ಆಕೆ ತೊಟ್ಟಿರುತ್ತಾಳೆ.

'ಕಾಳ್ಗಿಚ್ಚು' ಚಿತ್ರವೊಂದೇ ಭಾಗವತ ಪುರಾಣ ಎರಡನೆ ಕಂತಿನ ಸರಣಿಯನ್ನು ಪ್ರತಿನಿಧಿಸುತ್ತದೆ. ಸುಮಾರು ೧೭೬೦-೬೫ರಲ್ಲಿ ರಚಿಸಿರಬಹುದು ಹಾಗೂ ಈ ಚಿತ್ರಗಳು ಬಸ್ಸೋಲಿ ಶೈಲಿಯ ಬೆಳವಣಿಗೆಯ ಮುಂದಿನ ಹಂತವನ್ನು ಸೂಚಿಸುತ್ತದೆ. ಮುಖದ ಭಾವಗಳು ಹೆಚ್ಚು ಮೃದುವಾಗಿದ್ದು, ಜ್ವಾಲೆಯ ಉರಿಯು ಹೆಚ್ಚು ಸಹಜವಾಗಿದೆ. ಈ ಚಿತ್ರದಲ್ಲಿ ಎಳು ಗೊಲ್ಲರು ಭಯದಲ್ಲಿ ಕಣ್ಣು ಮುಚ್ಚಿದರೆ ವಿವಿಧ ಬಣ್ಣದ ಒಂಬತ್ತು ಹಸುಗಳು ಭಯದಲ್ಲಿ ಕಣ್ಣುಗಳನ್ನು ಅಗಲವಾಗಿ ತೆರೆದಿವೆ. ಕಾಡು ಮೃಗಗಳು ಜೀವವನ್ನು ರಕ್ಷಿಸಿಕೊಳ್ಳಲು ಓಡುತ್ತಿವೆ. ಕೃಷ್ಣನು ಬೆಂಕಿಯ ವೃತ್ತದ ಮಧ್ಯೆ ನಿಂತು ಹರಡುತ್ತಿರುವ ಬೆಂಕಿಯನ್ನು ತನ್ನ ಬಾಯೊಳಗೆ ತೆಗೆದುಕೊಳ್ಳುತ್ತಿದ್ದಾನೆ. ಅವನು ಬಿಳಿ ಹೂಗಳ ಮಾಲೆ ಹಾಗೂ ಕೆಂಪು ಧೋತಿಯನ್ನು ಧರಿಸಿದ್ದಾನೆ, ಹಳೆಯ ಬಸ್ಸೋಲಿ ಶೈಲಿಯ ಸಾಂಪ್ರದಾಯದಂತೆ ಹೊರವೃತ್ತದಲ್ಲಿ ಕಾಡೆಂದು ತಿಳಿಸಲು, ಶೈಲೀಕೃತ ಮರಗಳು, ಎಂದಿನಂತೆ ಮೇಲೆ ಕಿರಿದಾದ ಆಕಾಶದ ಪಟ್ಟಿ, ಪ್ರಕಾಶಮಾನ ಬಣ್ಣಗಳು ಹಾಗೂ ಆಕೃತಿಗಳನ್ನು ಒಂದೆಡೆ ಗುಂಪಾಗಿಸುವ ಶೈಲಿಯು ವ್ಯಕ್ತವಾಗಿದೆ.

ಕೊನೆಯ ಸರಣಿಯ ದೇವನಾಗರಿ ಲಿಪಿಯಲಿರುವ ಅಪರೂಪದ ಸಂಸ್ಕೃತ ಶಾಸನಗಳನ್ನು ಹೊಂದಿದೆ. ಈ ಶಾಸನವು ಹೇಳುವಂತೆ ರಾಜ ಕ್ರಿಪಾಲನು ವಿಕ್ರಮ ವರ್ಷದಂದು ಅಂದರೆ ೧೬೯೫ ದೇವಿದಾಸ ಎಂಬುವನಿಗೆ ಹೇಳಿ ವಿಷ್ಣುಸ್ಥಾಲಿ ಹೊಸ ಬಸ್ಸೋಲಿ ಎಂಬ ನಗರದಲ್ಲಿ ರಸಮಂಜರಿ ಚಿತ್ರಸರಣಿಯನ್ನು ರಚಿಸಲು ಹೇಳಿದನು. ಇಲ್ಲಿ ಚಿತ್ರಗಳು ಈ ಪ್ರಪಂಚದ ಪೊಳ್ಳುತನ ಹಾಗೂ ದೇವರ ಸೃಷ್ಟಿಯ ಶ್ರೇಷ್ಠತೆಯನ್ನು ಗೋಚರಿಸುವಂತಹದ್ದಾಗಿರಬೇಕೆಂದು ತಿಳಿಸಿದನು. ಚಿತ್ರದ ನಾಯಕರಲ್ಲಿ ಶೈವ ಹಾಗೂ ವೈಷ್ಣ ಧರ್ಮದ ಗುರುತುಗಳಿವೆ. ವೈಷ್ಣವ ಧರ್ಮವು ಹೆಚ್ಚು ಜನಪ್ರಿಯವಾದರೂ ಅದು ಶೈವ ಧರ್ಮವನ್ನು ಪೂರ್ಣವಾಗಿ ಮರೆಸಲು ಯಶಸ್ವಿಯಾಗಲಿಲ್ಲವೆಂದು ಇದು ತಿಳಿಸುತ್ತದೆ.

ಈ ಚಿತ್ರ ಸರಣಿಯಲ್ಲಿ ಬರುವ ವಾಸ್ತುಶಿಲ್ಪವು ಹಳೆಯ ಸಾಂಪ್ರದಾಯವನ್ನೇ ಧೃಡೀಕರಿಸುತ್ತಿದ್ದರೆ, ಸಾಂಪ್ರದಾಯಿಕ ಭೂದೃಶ್ಯ ವಿವರಣೆಯ ಸಮೃದ್ಧತೆಯು ಹೆಚ್ಚು ಸರಳ ವಿನ್ಯಾಸ ಹಾಗೂ ದೃಢ ಸಂಯೋಜನೆಗೆ ಎಡೆಮಾಡಿಕೊಟ್ಟಿದೆ. ಆಕೃತಿಗಳಲ್ಲಿ ಉತ್ತಮ ರೀತಿ ಹಾಗೂ ಸಹಜತೆಯತ್ತ ಹೆಚ್ಚಿನ ಒಲವು ಇರುವುದು ತಿಳಿದುಬರುತ್ತದೆ. ತರುಣರು ಉದ್ದವಾದ ಶರಾಯಿಗಳನ್ನು ತೊಡುವಂತೆ ಚಿತ್ರಿಸಲಾಗಿದೆ.

ದೇವದಾಸನ ಬಗ್ಗೆ ಶಾಸನಗಳಲ್ಲಿನ ಪ್ರಸ್ತಾಪನೆಯನ್ನು ಬಿಟ್ಟು ಬೇರೆ ಏನು ತಿಳಿದಿಲ್ಲ. ಅವನನ್ನು ಹೆಸರಿಸಿರುವುದೆ ಒಂದು ಪ್ರತ್ಯೇಕತೆಯಾಗಿದ್ದು, ಇದಕ್ಕೆ ಕಾರಣ ಅವನಿಗೆ ವಿಶಿಷ್ಟವಾದ ಪ್ರತಿಭೆ ಇರಬೇಕು ಅಥವಾ ಅವನು ಹೊರಗಿನವನಾಗಿರಬಹುದು. ಮುಖ್ಯವಾದ ಅಂಶಗಳಾದ ಚಿತ್ರ ಸಂಯೋಜನೆ ಹಾಗೂ ಆಕೃತಿಗಳನ್ನು ಬರೆಯುವ ರೀತಿ ಒಂದೇ ಆದರೂ ದೇವದಾಸನ ಶೈಲಿಯ ಪ್ರತಿಭೆ ಇರಬೇಕು ಮುಖ್ಯವಾದ ಅಂಶಗಳಾದ ಚಿತ್ರ ಸಂಯೋಜನೆ ಹಾಗೂ ಆಕೃತಿಗಳನ್ನು ಬರೆಯುವ ರೀತಿ ಒಂದೇ ಆದರೂ ದೇವದಾಸನ ಶೈಲಿಯ ಬಸ್ಸೋಲಿ ಕಲಾವಿದರ ಶೈಲಿಗಿಂತ ಭಿನ್ನವಾಗಿದೆ. ಮತ್ತೊಂದು ಮುಖ್ಯ ಚಿತ್ರಸರಣಿಯೆಂದರೆ ೧೮ನೇ ಶತಮಾನದ ಬಸ್ಸೋಲಿಯ ಶೈಲಿಯ ಪ್ರೌಢ ಹಂತದಲ್ಲಿ ರಚಿಸಲಾದ 'ಗೀತ ಗೋವಿಂದ' ಚಿತ್ರ ಸರಣಿ, ಇದು ಬಸ್ಸೋಲಿಯಿಂದ ಹುಟ್ಟಿರುವುದು ಎಲ್ಲರಿಗೂ ತಿಳಿದಿದೆ. ಶಾಸನವು ಶುದ್ಧ ಸಂಸ್ಕೃತದಲ್ಲಿ ಬರೆದಿದ್ದು ಹಾಗೂ ಬರವಣಿಗೆ ಸ್ಫುಟವಾಗಿರುವ ಕಾರಣ, ಅದರ ವ್ಯಾಖ್ಯಾನದಲ್ಲಿನ ಅನಿಶ್ಚತೆಯ ಕಾರಣ ಇದು ವಿದ್ವಾಂಸರಲ್ಲಿ ಹಲವಾರು ವಿವಾದಗಳನ್ನು ಎಬ್ಬಿಸಿದೆ. ವಿಷ್ಣುವಿನ ಭಕ್ತೆಯೊಬ್ಬಳು ಗುಲೇರದಿಂದ ಬಂದಿರಬಹುದಾದ ಮನಕು ಎಂಬ ಕಲಾವಿದನಿಂದ ಉತ್ತಮ ಕ್ಯಾಲಿಗ್ರಫಿಯನ್ನೊಳಗೊಂಡ 'ಗೀತ ಗೋವಿಂದ' ಚಿತ್ರವನ್ನು ಹೇಳಿ ಮಾಡಿಸಿದಳೆಂದು ನಂಬಲಾಗಿದೆ. ಬಳಕೆ ಇರುವುದರಿಂದ ಹಾಗೂ ಈ ಚಿತ್ರವನ್ನು ಲಾಹೋರ್ ಮ್ಯೂಸಿಯಮ್‌ನವರು ಬಸ್ಸೋಲಿಯಿಂದ ಪಡೆದಿರುವ ಕಾರಣ ಈ ಚಿತ್ರವನ್ನು ರಚಿಸಲು ಹೇಳಿರುವುದು ಬಸ್ಸೋಲಿಯ ರಾಣಿಯಿರಬಹುದೆಂದು ಹೇಳಬಹುದು. ಬಸ್ಸೋಲಿಯ ಅರಮನೆಯ ಹೆಂಗಸರಿಗೆ ವೈಷ್ಣವ ಧರ್ಮದ ಬಗ್ಗೆ ಇದ್ದ ಒಲವನ್ನು ಐತಿಹಾಸಿಕ ಪುರಾವೆಗಳು ಸಮರ್ಥಿಸುತ್ತವೆ.

ಮನಕುವಿನ ಹೆಸರೊಂದೆ ಪ್ರಸ್ತಾಪವಾಗಿದ್ದರೂ ವಿದ್ವಾಂಸರು ಅವನಿಗೆ ಒಬ್ಬ ಸಹಾಯಕರನಿದ್ದನೆಂದು ಗುರುತಿಸುತ್ತಾರೆ. ಈ ಎರಡನೆಯ ವ್ಯಕ್ತಿಗೆ ತನ್ನ ಗುರುವಿಗಿಂತ ಕಡಿಮೆ ಕೌಶಲ್ಯವನ್ನು ಹಾಗೂ ಕಡಿಮೆ ಧೈರ್ಯವನ್ನು ಹೊಂದಿರುವಂತೆ ಕಾಣುತ್ತದೆ, ಸುಮಾರು ಈ ಸರಣಿಯಲ್ಲಿ ೧೦೦ ಪುಟಗಳಿದ್ದು ಅದರಲ್ಲಿ ಐವತ್ತು ಚಿತ್ರಗಳಷ್ಟೆ ಲಾಹೋರ್ ಮ್ಯೂಸಿಯಮ್‌ನವರಿಗೆ ಸಿಕ್ಕಿದೆ. ಬಸ್ಸೋಲಿ ಶೈಲಿಯ ಮುಖ್ಯ ಅಂಶಗಳಾದ ಆಕರ್ಷಕ ಚಪ್ಪಟ ಹಿನ್ನಲೆ, ವಾಸ್ತುಶಿಲ್ಪದ ರೂಪರೇಖೆಗಳು, ಒಳದೃಶ್ಯಗಳು ಹಾಗೂ ಜೀರಂಕೆ ರೆಕ್ಕೆಗಳ ಬಳಕೆ ಕಾಣಬಹುದು, ಮುಖಗಳು ಹೆಚ್ಚು ರೂಪಿತವಾಗಿದ್ದು, ಕಣ್ಣಿನ ನೋಟದಲ್ಲಿ ತೀಕ್ಷ್ಣತೆ ಕಡಿಮೆ ಹಾಗೂ ಭೂದೃಶ್ಯವು ಹೆಚ್ಚು ಸಂಕೀರ್ಣವಾಗಿದೆ. ಗುಲೇರ್ ಶೈಲಿಯಲ್ಲಿರುವಂತೆ ಪಚ್ಚೆ ಹಸಿರಿನ ದೃಶ್ಯಗಳು ಹಾಗೂ ಭೂದೃಶ್ಯವು ಹೆಚ್ಚು ಸಂಕೀರ್ಣವಾಗಿದೆ. ಗುಲೇರ್ ಶೈಲಿಯಲ್ಲಿರುವಂತೆ ಪಚ್ಚೆ ಹಸಿರಿನ ದೃಶ್ಯಗಳು ಹಾಗೂ ಗೆರೆಗಳಲ್ಲಿನ ಲಾಲಿತ್ಯವು ಬಸ್ಸೋಲಿಯ ಶೈಲಿಯೊಳಗೆ ನುಸುಳಿದೆ. ಇವರಿಂದ ಮನಕು ಗುಲೇರಿನಿಂದ ಬಂದವನೆಂದು ಸ್ಪಷ್ಟವಾಗುತ್ತದೆ. ಉದಾಹರಣೆಗೆ - 'ರಾಧಾ ಹಾಗೂ ಕೃಷ್ಣ ಬಿರುಗಾಳಿಯನ್ನು ವೀಕ್ಷಿಸುತ್ತಿರುವುದು' ಎಂಬ ಚಿತ್ರದಲ್ಲಿ ಪ್ರಕೃತಿಯನ್ನು ಚಿತ್ರಿಸಲಾದ ಶೈಲಿ ಗುಲೇರದಾಗಿದ್ದರೂ ಚಿತ್ರದಲ್ಲಿನ ವಾಸ್ತು ಶಿಲ್ಪವು ಸೀಮೆಯನ್ನು ದಾಟಿಲ್ಲ. 'ಪ್ರೇಮದ ವಸಂತ ಮಂದಿರಕ್ಕೆ ಆಹ್ವಾನ' ಎಂಬ ಚಿತ್ರದಲ್ಲಿ ರಾಧಳ ಸಖಿಯರು ರಾಧಳನ್ನು ನಾಚಿಕೆಯನ್ನು ದೂರಮಾಡಿ ಮರದ ಕೆಳಗೆ ಕಾಯುತ್ತಿರುವ ಕೃಷ್ಣನ್ನು ಸಂದಿಸಬೇಕೆಂದು ಒತ್ತಾಯ ಮಾಡುತ್ತಿದ್ದಾರೆ.

ಗೀತ ಗೋವಿಂದ ಸರಣಿಯನ್ನು ರಚಿಸಿದ ಸುಮಾರು ಮೂವತ್ತು ವರ್ಷಗಳ ನಂತರ, ಅಂದರೆ ಸುಮಾರು ೧೭೭೦ರ ಹೊತ್ತಿಗೆ ಬಸ್ಸೋಲಿಯಲ್ಲಿ ಭಾಗವತ ಪುರಾಣದ ದೊಡ್ಡ ಚಿತ್ರವನ್ನು ಚಿತ್ರಗಳ ಪ್ರಾಮುಖ್ಯತೆ ಇರುವುದು ಶೈಲಿಯ ದೃಷ್ಟಿಯಲ್ಲಿ ಪೂರ್ಣವಾಗಿ ಬಸ್ಸೋಲಿ ಶೈಲಿಯು ಮಾಯವಾಗಿ, ಗುಲೇರ್ ಶೈಲಿಯ ಅಂಶಗಳನ್ನು ಇಲ್ಲಿ ಅಳವಡಿಸಿಕೊಳ್ಳಲಾಗಿದೆ. ಬಣ್ಣದ ಮಿಶ್ರಣಗಳು ತಂಪಾಗಿ ಕಾಣಿಸುವುದಲ್ಲದೆ ಆಕೃತಿಗಳು ಕಡಿಮೆ, ಹೆಚ್ಚು ತೀಕ್ಷ್ಣವಾಗಿಯೂ ಇಲ್ಲ ಹಾಗೂ ಜೀರುಂಡೆಯ ರೆಕ್ಕೆಗಳನ್ನು ಉಪಯೋಗಿಸಿಲ್ಲ. ಹಿನ್ನಲೆ ಸಮತಟ್ಟಾಗಿದ್ದರೂ ಗುಲೇರಿನಂತೆ ಕೆಂಪು, ಕಿತ್ತಳೆ ಬಣ್ಣಗಳನ್ನು ಮಾತ್ರ ಉಪಯೋಗಿಸಲಾಗಿದೆ, ಈ ಚಿತ್ರದಲ್ಲಿ ನಯನ್‌ಸುಕನ ಶೈಲಿಯ ಪ್ರಜ್ಞಾಪೂರ್ವಕ ಅನುಕರಣೆ ಇರುವ ಕಾರಣ ಈ ಚಿತ್ರದ ಕಲಾವಿದನ ಮೇಲೆ ತೀರ್ಥಯಾತ್ರೆಗೆಂದು ಬಸ್ಸೋಲಿಗೆ ಬಂದ ನಯನ್‌ಸುಕನ ಪ್ರಭಾವವಾಗಿದೆ ಎಂದು ತಿಳಿದು ಬರುತ್ತದೆ. ಈ ಚಿತ್ರ ಸರಣಿಯ ಪ್ರಮುಖ ಕಲಾವಿದ ಇವನಾಗಿದ್ದರೂ ಅವನು ರಚಿಸಿರುವ 'ಪಾಂಡವರ ಮನೆಯಲ್ಲಿ ಬೆಂಕಿ' ಎಂಬ ಚಿತ್ರದಲ್ಲಿ ನಕ್ಷತ್ರಗಳನ್ನು ತುಂಬಿಕೊಂಡ ರಾತ್ರಿಯಲ್ಲಿ ಹೊತ್ತಿ ಉರಿಯುತ್ತಿರುವ ಜ್ವಾಲೆಯನ್ನು ಅದ್ಭುತವಾಗಿ ಚಿತ್ರಿಸಲಾಗಿದೆ.

ಬಸ್ಸೋಲಿ ಶೈಲಿಯು ಹದಿನೆಂಟನೆ ಶತಮಾನದ ಮಧ್ಯಕಾಲದಿಂದವರೆಗೆ ಮುಂದುವರಿದು ಬೆಟ್ಟದ ರಾಜ್ಯಗಳಾದ -ಮಾನ್‌ಕೋಟ, ನರ್‌ಪುರ, ಕುಲು, ಮಾಂಡಿ, ಸುಕೆಟ್, ಬೈಲಾಸಪುರ, ನಾಲಾಗಾರ್ಹ್, ಚಂಬ, ಗುಲೇರ್ ಹಾಗೂ ಕಾಂಗ್ರಗಳಲ್ಲಿ ಸ್ಥಳೀಯ ಬದಲಾವಣೆಗಳೊಂದಿಗೆ ಒಂದು ಮಾದರಿ ಶೈಲಿಯಾಯಿತು.

ಹಲವಾರು ಸ್ಥಳಗಳಲ್ಲಿ ಉದಾಹರಣೆಗೆ ಕಾಂಗ್ರಾ ಶೈಲಿಯು ಸ್ಥಾಪಿತವಾಗಿದ್ದರೂ ಕಾಂಗ್ರಾದಲ್ಲಿ ಹಾಗೂ ಬಸ್ಸೋಲಿ, ಗುಲೇರದಲ್ಲಿ ಈ ಶೈಲಿ ಅಚ್ಚಳಿಯದೆ ಉಳಿದಿತ್ತು.

## ಕುಲು

ಬಸ್ಸೋಲಿ ಶೈಲಿಯಿಂದ ಭಿನ್ನವಾದ ಹಾಗೂ ವೈಶಿಷ್ಟ್ಯಪೂರ್ಣವಾದ ಶೈಲಿಯೆಂದರೆ ಕುಲು. ಕುಲುವಿನ ರಾಜಮನೆತನವು ರಜಪೂತರ ಹಿರಿಯ ಅಂಗವಾಗಿದ್ದು, ಬಸ್ಸೋಲಿಯಲ್ಲಿ ಕಿರಿದಾದ ಭಾಗವನ್ನು ಪಡೆದಿತ್ತು. ಹೀಗಾಗಿ ಇವೆರಡು ರಾಜ್ಯಗಳು ಸಾಂಸ್ಕೃತಿಕವಾಗಿ ಹಲವಾರು ಅಂಶಗಳನ್ನು ಹಂಚಿಕೊಂಡವು, ಚಿತ್ರಕಾರರನ್ನೂ ಕೂಡ. ಕುಲುವಿನ ರಾಜರು ವೈಷ್ಣವ ಧರ್ಮದ ಆರಾಧ್ಯರಾಗಿದ್ದ ಕಾರಣ, ಸುಮಾರು ೧೬೫೦ರಲ್ಲಿ ರಘುನಾಥ್ ಅಥವಾ ರಾಮನ ಪ್ರತಿಮೆಯನ್ನು ಅಯೋಧ್ಯ ಅಥವಾ ಔದ್‌ನಿಂದ ತಂದು ಅವರ ರಾಜಧಾನಿಯಲ್ಲಿ ಸ್ಥಾಪಿಸಿದರು. ಈ ದೇವರನ್ನು ಅನುಸರಿಸುವಂತೆ ತಮ್ಮ ರಾಜ್ಯಗಳನ್ನು ರೂಪಿಸಿ ಶ್ರೀ ರಘುನಾಥನ ರಾಜಪ್ರತಿನಿಧಿಗಳಂತೆ ರಾಜ್ಯವನ್ನು ಆಳಿದರು.

ಬಸ್ಸೋಲಿ ಚಿತ್ರಗಳಂತೆ ೧೭೦೦ - ೧೭೫೦ ಕುಲು ಶೈಲಿಯ ಚಿತ್ರಗಳಲ್ಲಿ ಅದೇ ರೀತಿಯ ಜೀವಂತ ಬಣ್ಣಗಳು, ಬಟ್ಟೆ, ಕೇಶಾಲಂಕಾರ, ಸಾಂಪ್ರದಾಯಿಕ ಮರಗಳು ಹಾಗೂ ಸಮತಟ್ಟಾದ ಹಿನ್ನಲೆಯನ್ನು ನೋಡಬಹುದು. ಕುಲು ಕಣಿವೆಯ ಒರಟಾದ ಹವೆ, ಬಂಡೆಗಳಿಂದ ಕೂಡಿದ ಭೂಭಾಗ ಚಿತ್ರದಲ್ಲಿ ದಪ್ಪನೆಯ ಆಕೃತಿಗಳಿಗೆ ಉಗ್ರ ಹಾಗೂ ವಿಚಲಿತ ಭಾವನೆಯನ್ನು ನೀಡುತ್ತದೆ. ಸಂಯೋಜನೆಯಲ್ಲಿ ಹೆಚ್ಚುಶ್ರಮ ಕಾಣುವುದಿಲ್ಲ. ರಾಮಾಯಣದ ಮೇಲಿನ ಸರಣಿಯನ್ನು ನೇಮಿಸಲಾದ ಕಣ್ಣಾರಿ ಬ್ರಾಹ್ಮಣರ ಪರಿವಾರವೊಂದು ರಚಿಸಿತೆಂದು ಹೇಳಲಾಗಿದೆ. ಈ ಚಿತ್ರಗಳು ಕುಲು ಶೈಲಿಯ ಉತ್ತಮ ಉದಾಹರಣೆಯಾಗಿದೆ.

ಹರಳಿ 'ವಾಲ್ಮೀಕಿಯ ಕುಟೀರ'ವೆಂಬ ಉತ್ತರಾಖಂಡದ ಐದನೆ ಭಾಗದ ನಿದರ್ಶನದ ದೃಶ್ಯದಲ್ಲಿ ಕಡು ಬಣ್ಣದ ಹಿನ್ನಲೆಯಲ್ಲಿ ತಿಳಿ ಹರಳದಿ ಬಣ್ಣದ ಎರಡು ಗುಡಿಸಲನ್ನು ಚಿತ್ರಿಸಲಾಗಿದೆ. ಚಿತ್ರದ ಮೇಲ್ಭಾಗದ ಮಧ್ಯದಲ್ಲಿ ಸೀತೆಯು ಸಣ್ಣದಾದ ಗುಡಿಸಲು ಮುಂದೆ ಕುಳಿತು, ದೊಡ್ಡ ಗುಡಿಸಲ ಮುಂದೆ ಕುಳಿತ ವಾಲ್ಮೀಕಿಯು ಲವ ಕುಶರಿಗೆ ಹೇಳಿಕೊಡುತ್ತಿರುವ ಪಾಠವನ್ನು ವೀಕ್ಷಿಸುತ್ತಿದ್ದಾಳೆ. ಬಲ ಭಾಗದಲ್ಲಿ ಮೂರು ಮರಗಳು ಹಾಗೂ ಅದಕ್ಕೆ ಹರಡಿಕೊಂಡ ಬಳ್ಳಿಗಳಿದ್ದು ಮಿಕ್ಕ ಮರಗಳನ್ನು ದೊಡ್ಡ ಗುಡಿಸಿಲ ಹಿಂದೆ ಕಾಣಬಹುದಾಗಿದೆ. ಮಕ್ಕಳು ತೊಟ್ಟಿರುವ ಚಡ್ಡಿಗಳು ಪಟ್ಟೆಗಳಿರುವ ಪ್ರಕಾಶಮಾನ ಬಣ್ಣಗಳು, ನೀಲಿ, ಕೆಂಪು, ಹಸಿರು ಬಣ್ಣಗಳಲ್ಲಿ ವಿನ್ಯಾಸಗಳಂತೆ ಚಿತ್ರಿಸಲಾದ ಎಲೆಗಳು ಬಸ್ಸೋಲಿ ಶೈಲಿಯನ್ನು ಪ್ರತಿಬಿಂಬಿಸುತ್ತದೆ. ಆದರೆ ಸೊಟ್ಟನೆಯ ಹಾಗೂ ಒರಟೊರಟ ಮಿಕ್ಕ ಮರದ ಟೊಂಗೆಗಳು (ಕುಲು ಕಲಾವಿದರಿಗೆ ದೇವದಾರು ಮರವೆಂದರೆ ಅಚ್ಚು ಮೆಚ್ಚು) ಹಾಗೂ ಸೀತಾಳ ಮುಖದ ರೂಪವೆಲ್ಲವು ಕುಲುವಿನ ವಿಶಿಷ್ಟ ಶೈಲಿಯಲ್ಲಿದೆ.

## ಗುಲೇರ

ಗುಲೇರ ಭಾರತೀಯ ಚಿತ್ರಕಲೆಯಲ್ಲಿ ಕಾಂಗ್ರಾ ಶೈಲಿಯ ಜನ್ಮಸ್ಥಾನವೆಂದು ಪ್ರಖ್ಯಾತಿಗೊಂಡಿರುವ ಗುಲೇರ ರಾಜ ಹರಿಚಂದನು ೧೪೦೫ರಲ್ಲಿ ಸ್ಥಾಪಿಸಿದನು. ಬೇಟೆಗೆಂದು ಹೊರಟ ಹರಿಚಂದನು ಕಾಡಿನಲ್ಲಿ ಕಾಣೆಯಾದನು. ಅವನ ಹೆಂಡತಿಯರು ರಾಜ ಸತ್ತನೆಂದು ತಿಳಿದು ಸತಿಯನ್ನು ಅಪ್ಪಿದರು. ಅವನ ತಮ್ಮ ಸಿಂಹಾಸನವನ್ನೇರಿದನು. ಆದರೆ ಸುಮಾರು ಒಂದು ತಿಂಗಳ ನಂತರ ವ್ಯಾಪಾರಿಯೊಬ್ಬನು ಹರಿ ಚಂದನನ್ನು ರಕ್ಷಿಸಿದನು. ಹರಿಚಂದನು ಕಾಂಗ್ರಾಗೆ ತೆರಳುವುದನ್ನು ಬಿಟ್ಟು ಗುಲೇರ ಸ್ಥಾಪಿಸಿ, ಹೊಸ ರಾಜ್ಯವನ್ನು ಕಟ್ಟಿದನು. ಕಾಂಗ್ರಾ ಗುಲೇರಿಗಿಂತ ಹೆಚ್ಚು ಶಕ್ತಿಯುತ ಹಾಗೂ ದೊಡ್ಡ ರಾಜ್ಯವಾದರೂ, ಗುಲೇರ ಕಟೋಚ್ ಪರಿವಾರದ ಹಿರಿಯ ಅಂಗವೆನಿಸಿಕೊಂಡ ಅಗ್ರಸ್ಥಾನವನ್ನು ಪಡೆಯಿತು. ಸಿವಾಲ್ಕಿಸ್ ಪರ್ವತ ಶ್ರೇಣಿಯ ಕಡೆ ಹರಿಯುವ ಬನ್ ಗಂಗಾನದಿಯ ತೀರದಲ್ಲಿ ರಾಜಧಾನಿ ಹರಿಪುರ ಹಾಗೂ ಗುಲೇರ ನಗರಗಳು ಎದುರು ಬದಿರಾಗಿ ನಿಂತವು. ನದಿಯ ಚಿತ್ರಣವನ್ನು ಗುಲೇರ್‌ನ ಚಿತ್ರಗಳಲ್ಲಿ ನೋಡಬಹುದು.

ಕಾಂಗ್ರಾ ಕಣಿವೆಯ ಬಾಗಿಲಾಗಿರುವ ಹಾಗೂ ಸುಭದ್ರ ಪರ್ವತ ರಾಜ್ಯಗಳಿಂದ ಕೂಡಿರುವ ಕಾರಣ ೧೭೩೯ರಲ್ಲಿ ನಾದಿರ್ ಶಾಹನ ಭಯದಿಂದ, ಬೇಸತ್ತ ಕಲಾವಿದರು ಪಂಜಾಬಿನ ಬಯಲು ಪ್ರದೇಶದ ಮಾರ್ಗವಾಗಿ ಗುಲೇರ್‌ಗೆ ಬಂದು ತಲುಪಿದರು. ದಿಲೀಪ್ ಸಿಂಗನ ಆಳ್ವಿಕೆಯಲ್ಲಿ (೧೬೯೫-೧೭೪೧) ಹರಿಪುರದಲ್ಲೊಂದು ಚಿತೇರಾ (ಕಲಾವಿದರ ಗುಂಪು)ವೆಂಬುದಿತ್ತು ಎಂದು ಹೇಳಲಾಗಿದೆ. ಆರಂಭಿಕ ಚಿತ್ರಗಳಲ್ಲಿ ದಿಲೀಪ ಸಿಂಗನ ಭಾವ ಚಿತ್ರಗಳು ಚಿತ್ರಕಲೆಗೆ ಸಿಗುತ್ತಿದ್ದ ಪ್ರೋತ್ಸಾಹ ಹಾಗೂ ಮೊಹಮ್ಮದ್ ಶಾಹ್ ಕಾಲದ ಮೊಗಲರ ಶೈಲಿಯ ಪ್ರಭಾವವನ್ನು ನೋಡಬಹುದು.

ಹದಿನೆಂಟನೆ ಶತಮಾನದ ಆರಂಭದಲ್ಲಿ ಗುಲೇರ ಮಿಲಿಟರಿ ಅಥವಾ ರಜಾಕೀಯ ಅಧಿಕಾರಕ್ಕೆ ಪ್ರಾಧಾನ್ಯತೆ ಕೊಡುತ್ತಿರಲಿಲ್ಲ. ಇದರಿಂದ ಚಿತ್ರಕಲೆಯು ಬೆಳೆದು, ಗೋವರ್ಧನ್ ಚಂದನೆಂಬುವನು ತನ್ನೆಲ್ಲಾ ಸಮಯವನ್ನು ಕಲೆ ಹಾಗೂ ಪತ್ರಗಳ ಬೆಳವಣಿಗೆಗೆ ರಾಜಾಶ್ರಯಕ್ಕಾಗಿ ಕೊಟ್ಟನು. ಅವನು ನಡೆಸಿದ ಒಂದೇ ಯುದ್ಧದ ಕಾರಣ ಮೊಗಲ್ ಜಲಂದರ್‌ನ ರಾಜ್ಯಪಾಲ ಅದ್ಯೆನಾಬೇಗ್‌ನ ಜತೆ ಅವನ ಪ್ರಿಯ ಕುದುರೆಯ ವಿಷಯವಾಗಿ ನಡೆದ ಜಗಳ, ೧೭೪೦ ಬಸ್ಸೋಲಿಯ ಮದುವೆ ಮಾಡಿದನು. ಈ ಮದುವೆಯ ಬಂಧವು ಇವೆರಡು ರಾಜ್ಯಗಳ ನಡುವೆ ಈಗಾಗಲೇ ಇದ್ದ ಆಪ್ತ ಸಂಬಂಧವನ್ನು ಹೆಚ್ಚು ಭದ್ರಮಾಡಿದವು. ಈ ಅದ್ದೂರಿ ಸಮಾರಂಭಕ್ಕಾಗಿ ಗುಲೇರಿಗೆ ಸೇರಿದ್ದ ಮನಕು ಎಂಬ ಕಲಾವಿದನನ್ನು ಬಸ್ಸೋಲಿಗೆ ಕಳುಹಿಸಿ ಗೀತ ಗೋವಿಂದ ಸರಣಿಯನ್ನು ರಚಿಸುವಂತೆ ಹೇಳಲಾಯಿತೆಂದು ಹಲವಾರು ವಿದ್ವಾಂಸರು ಹೇಳುತ್ತಾರೆ.

ಗೋವರ್ಧನ ಚಂದ್ನ ಕಾಲಕ್ಕೆ ಸೇರಿಸಬಹುದಾದ, ಕಲಾವಿದರ ಸಹಿಗಳನ್ನು ಹೊತ್ತ ಚಿತ್ರಗಳ ಕಲಾವಿದರ ಬಗ್ಗೆ ತಿಳಿದುಬಂದಿಲ್ಲ. ಪಂಡಿತ ಸಿಯು ಪರಿವಾರದವರ ಶೈಲಿಯನ್ನು ತನ್ನ ವಿಶಿಷ್ಟತೆಯ ಕಾರಣದಿಂದ ಗುರುತಿಸಲಾಗುತ್ತದೆ ಸಾಮ್ಯತೆಯನ್ನು ಸೆರೆ ಹಿಡಿಯುವುದರಲ್ಲಿ ಅವರು ತೋರಿಸುವ ವಿಶೇಷ ಆಸಕ್ತಿ, ವಿವಿಧ ಭಂಗಿಗಳು ಹಾಗೂ ಹಾವಭಾವಗಳು, ರೇಖೆಗಳ ರಚನೆಯಲ್ಲಿ ತೋರಿಸುವ ಹಿಡಿತ ಹಾಗೂ ಸಾಮಾನ್ಯವಾಗಿ ಕಾಣುವ ಸಹಜತೆಯ ವಾತಾವರಣ ಕಾಣಬಹುದು.

ಆರಂಭಿಕ ಗುಲೇರ ಚಿತ್ರಗಳಿಗೆ ಉದಾಹರಣೆ ಎಂದರೆ ರಾಮಾಯಣದಿಂದ ತೆಗೆದುಕೊಳ್ಳಲಾದ ಯುದ್ಧಕಾಂಡದ ಚಿತ್ರ ಸರಣಿ ತನ್ನ ದೊಡ್ಡಳತೆಯ ಚಿತ್ರಗಳಿಂದ ಪಹಾರಿ ಚಿತ್ರಗಳು ಪ್ರತ್ಯೇಕತೆಯನ್ನು ಸ್ಥಾಪಿಸಿದೆ. ಸಾಧಾರಣವಾಗಿ ೬೦x೮೩.೫ ಸೆ.ಮಿ. ಗಳಷ್ಟು ಗಾತ್ರದ ಚಿತ್ರಗಳಿರುತ್ತದೆ. ಈ ಅಸಾಮಾನ್ಯ ಅಳತೆಯ ಕಾರಣ ಯಾರಿಗೂ ತಿಳಿದಿಲ್ಲ. ಹಲವಾರು ಚಿತ್ರಗಳು ಅಪೂರ್ಣವಾಗಿದ್ದು ಕೆಲವು ಚಿತ್ರಗಳಿಗೆ ಬಣ್ಣ ತುಂಬದೆ ಬಿಡಲಾಗಿದೆ. ಈ ಚಿತ್ರವನ್ನು ಸುಮಾರು ೧೭೨೫ ಕಾಲದಲ್ಲಿ ರಚಿಸಲು ಸೂಚಿಸಲಾಗಿತ್ತು ಎಂದು ಊಹಿಸಲಾಗಿದೆ.

ಪೂರ್ಣವಾಗಿರುವ ಚಿತ್ರಗಳಲ್ಲಿ ಒಂದರ ಶೀರ್ಷಿಕೆ 'ಗೂಢಾಚಾರರ ಬಂಧನ' ಮರಗಳೊಂದಿಗಿರುವ ಕಿರು ಬೆಟ್ಟದ ಎಡಭಾಗದಲ್ಲಿ ರಾವಣನ ಕೋಟೆಯು ಕಟ್ಟಲಾಗಿದೆ. ಈ ಮರಗಳಲ್ಲಿ ಬಾಳೆ ಹೂಗಳು ಬಲಭಾಗದಲ್ಲಿ ಬೆಟ್ಟದ ತುಂಬ ಮರಗಳು ಹಾಗೂ ಮರಗಳಲ್ಲಿ ಕೋತಿಗಳನ್ನು ಚಿತ್ರಿಸಲಾಗಿದೆ. ಒಳ ಭಾಗದಲ್ಲಿ ವಿಭೀಷಣನು ಕೋತಿಯ ವೇಷದಲ್ಲಿರುವ ರಾವಣನ ಇಬ್ಬರು ಗೂಢಾಚಾರರನ್ನು ರಾಮನಿಗೆ ಒಪ್ಪಿಸುತ್ತಿದ್ದಾನೆ ಎಂದುರಿರುವ ನೀರು ಹರೀಪುರದ ಕೋಟೆ ಹಾಗೂ ಬನ್ ಗಂಗಾನದಿಯ ನೋಟಕ್ಕೆ ಬಹಳ ಹೋಲುತ್ತದೆ. ಬಾಳೆ ಮರಗಳು ಹಾಗೂ

ವೃಕ್ಷಗಳಿಂದ ತುಂಬಿದ ಸ್ಥಳೀಯ ದೃಶ್ಯಗಳ ಬಳಿಕೆಯ ನಂತರದ ಗುಲೇರ ಚಿತ್ರಗಳಲ್ಲಿ ಮೈಲುಗಲ್ಲನ್ನು ಸ್ಥಾಪಿಸಿದೆ. ಅದಲ್ಲದೆ ಚಪ್ಪಟೆನೆಯ ಹಿನ್ನೆಲೆ (ಸಾಮಾನ್ಯವಾಗಿ ಕೆಂಪು ಬಣ್ಣದಲ್ಲಿ), ಬಂಗಾರದ ಬಳಕೆ, ಪ್ರಾಣಿಗಳು ಹಾಗೂ ಜೋಡಿ ಹಕ್ಕಿಗಳನ್ನು ಚಿತ್ರಿಸುವ ಸಹಜಶೈಲಿಯೂ ಗುಲೇರ್‌ ಚಿತ್ರಕಲೆಯ ವಿಶಿಷ್ಟತೆಯಾಗಿದೆ. ಈ ಚಿತ್ರದಲ್ಲಿ ಮಾತ್ರ ಹಿನ್ನೆಲೆಯು ಚಪ್ಪಟೆಯಾಗಿದ್ದು ಕೇಸರಿ-ಕೆಂಪು ಬಣ್ಣದ ಆಕಾಶವನ್ನು ಚಿತ್ರಿಸಲಾಗಿದೆ.

ಗುಲೇರ ರಾಜ 'ಗೋವರ್ಧನ್ ಚಂದ'ನ ಆರಂಭಿಕ ಭಾವಚಿತ್ರಗಳಲ್ಲಿ ೧೭೪೫ 'ಸಂಗೀತವನ್ನು ಕೇಳುತ್ತಿರುವಂತೆ ಚಿತ್ರಿಸಲಾಗಿದೆ'. ಮುಸ್ಲಿಮ್ ಶೈಲಿಯಲ್ಲಿ ಕುಳಿತ ರಾಜನು ಹಳದಿ ಜಾಮ ಹಾಗೂ ಕೆಂಪು ಸ್ಕಾರ್ಫ್ ಅನ್ನು ಬಲಭಾಗದಲ್ಲಿ ಆರು ಆಸ್ಥಾನದ ದರಬಾರಿಗಳು ಸಾಲಾಗಿ ಕುಳಿತಿದ್ದಾರೆ. ಇವರೆದಿರು ಐದು ಜನ ಸಂಗೀತಕಾರರು ಕುಳಿತಿದ್ದು ಅವರ ಹಿಂದೆ ಅಪೂರ್ವವಾಗಿ ಚಿತ್ರಿಸಲಾದ ಆಕೃತಿಗಳು ನಿಂತಿವೆ, ಬಿಳಿ ಹಿನ್ನೆಲೆಯಲ್ಲಿ ಬಳಸಲಾದ ಕೆಂಪು, ಹಳದಿ, ಹಸಿರು ಹಾಗೂ ನೀಲಿ ಬಟ್ಟೆಗಳು ವೈರುಧ್ಯವನ್ನು ತರುತ್ತದೆ. ಈ ಚಿತ್ರಕ್ಕೆ ಹಗುರವಾಗಿ ತೋರಿಸಲಾದ ಎಲೆಗಳುಳ್ಳ ಮರವನ್ನು ಮುನ್ನೆಲೆಯಾಗಿ ಬಳಸಲಾಗಿದೆ.

ಈ ಚಿತ್ರದಲ್ಲಿ ಉಪಯೋಗಿಸಲಾದ ಶೈಲಿಗಳಲ್ಲಿ ಎರಡು ಅಭಿವ್ಯಕ್ತಿಯ ರೀತಿಗಳನ್ನು ಕಾಣಬಹುದು ಒಂದರಲ್ಲಿ ಬೂದಿ ಹರವಿನ ನೀರು, ಬೆಟ್ಟಗಳು, ವಾಸ್ತುಶಿಲ್ಪಗಳು ಹಾಗೂ ಸಾಲಾಗಿ ನಿಂತ ಆಕೃತಿಗಳ ಚಿತ್ರಣದಲ್ಲಿ ಸಾಂಪ್ರದಾಯಿಕ ಶೈಲಿಗೆ ಹೊಂದುವಂತಿದೆ. ಇನ್ನೊಂದರಲ್ಲಿ ಮುನ್ನೆಯಾಗಿ ಉಪಯೋಗಿಸಲಾದ ಮರಗಳ ಎಲೆಗಳನ್ನು ಚಿತ್ರಿಸುವಾಗ ತೋರಿಸುವ ಸಹಜತೆ, ರೇಖೆಗಳಲ್ಲಿ ರಚಿಸಲಾದ ಸಂಗೀತಕಾರರ ವಿವಿಧ ಸಹಜತೆಯತ್ತ ಒಲವನ್ನನು ತೋರಿಸುತ್ತವೆ. ಈ ಎರಡನೆ ರೀತಿಯ ಚಿತ್ರಗಳನ್ನು ಪ್ರತಿಭಾವಂತನಾದ ಕಲಾವಿದನು ರಚಿಸಲಾಗಿದೆಯೆಂದು ಹೇಳಬಹುದು.

'ಹಾಡುತ್ತಿರುವ ಬಾಲಕಿಯರ ಸಂಗೀತವನ್ನು ಕೇಳುತ್ತಿರುವ ರಾಜಕುಮಾರಿ' ಎಂಬ ಚಿತ್ರವು ಹಿಂದಿನ ಚಿತ್ರಕ್ಕೆ ಬಹಳಷ್ಟು ಹೋಲುತ್ತದೆ. ಬಹುಶಃ ೫ ವರ್ಷಗಳ ನಂತರ ರಚಿಸಲಾದ ಈ ಚಿತ್ರದಲ್ಲಿ ಅದೇ ಮೂರು ಅಂಶಗಳನ್ನು ಕಾಣಬಹುದು. ಮರಗಳ ಮುನ್ನೆಲೆ ಮಧ್ಯದಲ್ಲಿ ತಾರಸಿ ಹಾಗೂ ಅದರ ಆಚೆ ಕಮಲದ ಎಲೆಗಳು ಹಾಗೂ ಹೂಗಳಿರುವ ಬೂದಿಬಣ್ಣದ ನೀರಿನ ಹರವಿದೆ. ಹಿನ್ನೆಲೆಯಲ್ಲಿ ಮರಗಳಿರುವ ಬೆಟ್ಟಗಳು ಹಾಗೂ ಸಣ್ಣ ಬಿಳಿಯ ಕಟ್ಟಡ ಹಿಂದಿನ ಚಿತ್ರದಲ್ಲಿರುವ ಬೂದಿ ಬಣ್ಣದ ಸಮಾನಂತರ ಚತುರ್ಭುಜವನ್ನು ಇಲ್ಲಿ ರಚಿಸಲಾಗಿದೆ.

ಇದರ ಕೆಳಗೆ ರಾಜ ಮಹಿಳೆಯೊಬ್ಬಳು ಬಂಗಾರದ ಮೇಜಿನ ಮೇಲೆ ಕುಳಿತುಕೊಂಡು, ತನ್ನ ಬಲಗೈಯಲ್ಲಿ ಗಿಡುಗನನ್ನು ಎಡಗೈಯಲ್ಲಿ ಹುಕ್ಕಾವನ್ನು ಹಿಡಿದ್ದಾಳೆ. ಇಬ್ಬರು ಸೇವಕಿಯರು ಅವಳ ಹಿಂದೆ ನಿಂತಿದ್ದಾರೆ. ಅವಳ ಬಲಕ್ಕೆ ಒಬ್ಬಳು ಹಿರಿಯ ಮಹಿಳೆ ಹಾಗೂ ಬಾಲಕಿಯೊಬ್ಬಳು ಸ್ವಲ್ಪ ಕೆಳಗೆ ನಿಂತಿದ್ದಾಳೆ. ಇಬ್ಬರು ಬಾಲಕಿಯರು ಅವಳಿಗೆ ಮುಸ್ಲಿಮ್ ಶೈಲಿಯಲ್ಲಿ ರಾಜಕುಮಾರಿಯ ಮುಂದೆ ಬಗ್ಗಿ ನಮನ ಸಲ್ಲಿಸುತ್ತಿದ್ದಾರೆ. ಅವರ ಹಿಂದೆ ಇಬ್ಬರು ಸೇವಕಿಯರಿದ್ದು ಹಾಗೂ ಒಬ್ಬ ಸೇವಕನೂ ಇದ್ದಾನೆ. ಬಲಗಡೆಯ ಮುನ್ನೆಲೆಯಲ್ಲಿ ಹುಡುಗಿಯೊಬ್ಬಳು ತಂಬೂರ ಮೀಟುತ್ತಾ ಕುಳಿತಿದ್ದಾಳೆ.

ಚಿತ್ರದಲ್ಲಿ ಕಾಣುವ ಚಿತ್ರದ ಸಂಯೋಜನೆ ಆಕೃತಿಗಳ ವಿಂಗಡನೆ, ಮುಖದ ಆಕೃತಿಗಳನ್ನು ಚಿತ್ರಿಸಿರುವ ರೀತಿ, ಭೂದೃಶ್ಯದಲ್ಲಿರುವ ಸಹಜತೆ ಇವೆಲ್ಲವು ಇದನ್ನು ಒಬ್ಬ ಪ್ರತಿಭಾವಂತ ಕಲಾವಿದನ ರಚನೆಯೆಂದು ತಿಳಿಸುತ್ತದೆ. ಈ ಸಮಯದಲ್ಲಿ ನಯನ್‌ಸುಖಾನು ಜಮ್ಮು ಪ್ರದೇಶದಲ್ಲಿ ಇದ್ದ ಕಾರಣ, ಈ ಚಿತ್ರವನ್ನು ಅವನ ಪರಿವಾರದ ಸದಸ್ಯರೊಬ್ಬರು ಅಥವಾ ಗುಲೇರ ಕಲಾವಿದನಿಗೆ ಸಂಬಂಧವಿಲ್ಲದ ಆದರೆ ಆ ಶೈಲಿಗೆ ಬದ್ಧರಾದ ಯಾರೋ ರಚಿಸಿರಬಹುದೆಂದು ಹೇಳಲಾಗಿದೆ. ಗುಲೇರಿನ ಸುಂದರ ದೃಶ್ಯಗಳಿಂದ ಪ್ರೇರಿತವಾಗಿ ಪ್ರಕೃತಿಯ ಬಗೆಗಿನ ವಿಶಿಷ್ಟ ಒಲವಿನ ಫಲವಾಗಿ 'ವಿಹಾರಕ್ಕೆ ಹೊರಟ ರಾಜಕುಮಾರಿ' ತಿಳಿ ಕಂದು ಬಣ್ಣದ ಕುದುರೆಯ ಮೇಲೆ ರಾಜಕುಮಾರಿಯು ತನ್ನ ಬಲಗೈಯಲ್ಲಿ ಗಿಡುಗನನ್ನು ಹಿಡಿದಿದ್ದಾಳೆ. ಅವಳು ಉದ್ದನೆಯ ಬಟ್ಟೆಯನ್ನು ತೊಟ್ಟಿದ್ದು, ತಲೆಗೆ ಪುಕ್ಕಗಳಿರುವ ಸೊಬಗಿನ ಪೇಟವನ್ನು ಧರಿಸಿದ್ದಾಳೆ. ಆರು ಸೇವಕಿಯರು ಅವಳ ಜೊತೆಯಿದ್ದಾರೆ. ಮುಂದೆ ನಿಂತ ಸೇವಕಿ ಗಂಡಸರ ಬಟ್ಟೆಯನ್ನು ತೊಟ್ಟು ಕೈಯಲ್ಲಿ ಕತ್ತಿಯನ್ನು ಹಿಡಿದ್ದಾಳೆ. ಬೆಟ್ಟಗಳು, ಕಮಲಗಳು, ಸುತ್ತಿರುವ ನಾಜೂಕಾದ ಹುಲ್ಲು, ಸರೋವರದಲ್ಲಿರುವ ಕಮಲಗಳು ಹಾಗೂ ಜಲಪಕ್ಷಿಗಳು - ಇವೆಲ್ಲವು ಪ್ರಕೃತಿಯ ಆಸ್ವಾದನೆಯ ಬಗ್ಗೆ ಅವರಿಗಿದ್ದ ಒಲವನ್ನು ತೋರಿಸುತ್ತದೆ ಹಾಗೂ ಸರಳ ಹಿನ್ನೆಲೆಯನ್ನು ರಚಿಸುತ್ತಿದ್ದ ಸಾಂಪ್ರದಾಯಿಕ ಶೈಲಿಗಿಂತ ಭಿನ್ನವಾಗಿದೆ.

ಎಲ್ಲಾ ಉತ್ತಮ ಕೃತಿಗಳಲ್ಲೂ ಹೆಣ್ಣಿನ ಸೌಂದರ್ಯ ಹಾಗೂ ಬೆಡಗಿನ ಚಿತ್ರಣವಿದೆ. ಉದಾಹರಣೆಗೆ 'ವಿಪ್ರಲಾಭ ನಾಯಿಕಾ' ಎಂಬ ಚಿತ್ರದಲ್ಲಿ ಕಾಣುವ ಆ ಮಹಿಳೆಯರು ದಿಟ್ಟ ಭಂಗಿ ಅವಳ ಮುಖದ ರಚನೆಯಲ್ಲಿ ಕಂಡು ಬರುವ ಸೂಕ್ಷ್ಮತೆ, ಅವಳ ರಮ್ಯ ಉಡುಗೆ ಹಾಗೂ ಆಭರಣಗಳು ಒಳ್ಳೆಯ ಕಲೆಗಾರಿಕೆಯನ್ನು ಬಿಂಬಿಸುತ್ತದೆ. ಚಿತ್ರದಲ್ಲಿನ ನಾಯಿಕಿ ತನ್ನ ಪ್ರಿಯತಮ ಹೇಳಿದ ಸಮಯಕ್ಕೆ ಬರಲಿಲ್ಲವೆಂದು ಬೇಸರದಲ್ಲಿ ತನ್ನ ಆಭರಣಗಳನ್ನು ಕಿತ್ತೊಗೆಯುತ್ತಾಳೆ. ತಿಳಿಕಂದು ಬಣ್ಣದ ಕುಬುಸದ ಮೇಲೆ ಹಳದಿ ಬಣ್ಣದ ಅರೆ - ಪಾರದರ್ಶನ ದಾವಣಿಯನ್ನು ತೊಟ್ಟಿದ್ದಾಳೆ, ಬಣ್ಣದ ಲಂಗವನ್ನು ತೊಟ್ಟಿದ್ದಾಳೆ. ಕಂದು ಬಣ್ಣದ ಕಾಂಡವನ್ನುಳ ತೆಳುವಾದ ಮರ, ತೆಳುವಾದ ಶಾಖೆಗಳ ಹಾಗೂ ಗುಲಾಬಿ ಬಣ್ಣದ ಹೂಗಳು ಮೊದಲ ಬಾರಿಗೆ ಇಲ್ಲಿ ಕಾಣಿಸುತ್ತವೆ. ಇದೇ ರೀತಿಯ ಮರಗಳು ಮುಂದೆ ರಚಿಸಲಾದ ಚಿತ್ರಗಳಲ್ಲೂ ಕಾಣಬಹುದಾಗಿದೆ. ಸರಳ ಹಿನ್ನೆಲೆ ಇಲ್ಲಿ ಬದಲಾವಣೆ ಕಾಣುತ್ತದೆ. ಬೂದಿ ಬಣ್ಣದ ಬೆಟ್ಟ, ಮಂಕಾದ ಬಿಳಿ ಆಕಾಶ, ನಕ್ಷತ್ರಗಳು ಹಾಗೂ ಪೂರ್ಣಚಂದ್ರ ಹಿನ್ನಲೆ ಇಲ್ಲಿ ಬದಲಾವಣೆ ಕಾಣುತ್ತದೆ. ಬೂದಿ ಬಣ್ಣದ ಬೆಟ್ಟ, ಮಂಕಾದ ಬಿಳಿ ಆಕಾಶ, ನಕ್ಷತ್ರಗಳು ಹಾಗೂ ಪೂರ್ಣಚಂದ್ರ ಹಿನ್ನೆಲೆಯಾಗಿವೆ, ಬಲಗಡೆಗೆ ಸುತ್ತಿಕೊಂಡಿರುವ ಬಳ್ಳಿಗಳುಳ್ಳ ಮೂರು ಮರಗಳನ್ನು ನೋಡಬಹುದಾಗಿದೆ.

ಲಾವಣ್ಯ ಹಾಗೂ ಪ್ರಶಾಂತತೆಯಿಂದ ತುಂಬಿರುವ ಗುಲೇರ್‌ನ ಸುಂದರ ಹೆಣ್ಣನ್ನು 'ಮೂರು ಮಹಿಳೆಯರೊಡನೆ ಕುಳಿತ ರಾಜಕುಮಾರ' ಚಿತ್ರದಲ್ಲಿ ಆದರ್ಶೀಕರಿಸಲಾಗಿದೆ. ಒಂದು ಮೂರು ಮಹಿಳೆಯರು ರಾಜಕುಮಾರನ ಮುಂದೆ ಕುಳಿತಿದ್ದಾರೆ. ಅವನು ಹಸಿರು ಹೂಗಳಿರುವ ಪೈಜಾಮ ಹಾಗೂ ಚಿತ್ರಗಳಿರುವ ಗುಲೇರ ಲಂಗವನ್ನು ಧರಿಸಿ, ತಲೆಯನ್ನು ಸ್ವಲ್ಪ ಬಗ್ಗಿಸಿ ನಿಂತಿದ್ದಾನೆ, ಸೂಕ್ಷ್ಮವಾಗಿ ಚಿತ್ರಿಸಲಾದ ಮುಖವನ್ನು ದಟ್ಟ ಕಂದು ಬಣ್ಣದ ಗೋಡೆಯು ಎತ್ತಿ ಕಾಣಿಸುವಂತೆ ಮಾಡುತ್ತವೆ. ಎಡಕ್ಕಿರುವ ಮೂರು ಮರಗಳಲ್ಲಿ ಒಂದು ಮರವು ವಿಶಿಷ್ಟ ಗುಣವನ್ನು ಹೊಂದಿದೆ. ದಟ್ಟ ಕಂದು ಬಣ್ಣದ ಶಾಖೆಗಳಿರುವ ತೆಳ್ಳನೆಯ ಮರದ ತುಂಬ ತಿಳಿನೀಲಿ ಆಕಾಸ ಹಿನ್ನೆಲೆಯಲ್ಲಿ ಬಿಳಿ ಹೂಗಳು, ಗುಲೇರದಲ್ಲಿ ಹೆಚ್ಚಾಗಿ ಬೆಳೆದು ನೈದಿಲೆಗಳ ಸಮೂಹ ಚಿತ್ರದ ಮುನ್ನೆಲೆಯಾಗಿ ಶೋಭಿಸುತ್ತದೆ. 'ಪ್ರೇಮಿಗಳ ಕಲಹ' ಚಿತ್ರದಲ್ಲಿ ರಾಧಾಳ ಚಿತ್ರಣ ಮುಖ್ಯವಾಗಿದ್ದು, ಇದು ಹೆಂಗಸನ್ನು ಚಿತ್ರಿಸುವಾಗ ಅವರು ತೋರಿಸುತ್ತಿದ್ದ ಸೂಕ್ಷ್ಮತೆಯನ್ನು ಬಿಂಬಿಸುತ್ತದೆ.

ಅಪೂರ್ಣಗೊಂಡ 'ಬಿಲ್ಲು ಬಗ್ಗಿಸುವುದು' ಚಿತ್ರದಲ್ಲಿ ಮೊಗಲ್ ಶೈಲಿಯಲ್ಲಿ ರಚಿಸಲಾದ ಮುಖಗಳು ಹಾಗೂ ಕೌಶಲ್ಯದಿಂ ಎಳೆಯಲಾದ ಪ್ರೇಕ್ಷಕರ ಆಕೃತಿಗಳು ಸೀತಾಳನ್ನು ಗೆಲ್ಲಲು ರಾಮನು ಬಿಲ್ಲನ್ನು ಬಗ್ಗಿಸುತ್ತಿರುವುದನ್ನು ನೋಡುತ್ತಿದ್ದಾರೆ. ಎಡಭಾಗದಲ್ಲಿ ಕುಳಿತ ಮಹಿಳೆಯರಲ್ಲಿ ವಿವಿಧ ರೀತಿಯ ಮುಖಗಳನ್ನು ಚಿತ್ರಿಸಲಾಗಿದೆ. ಬಲದಲ್ಲಿ ಲಕ್ಷ್ಮಣ, ವಿಶ್ವಾಮಿತ್ರ ಹಾಗೂ ಇತರ ಸಂತರು ಕುಳಿತಿದ್ದು,

(ಪುಟ 9ಕ್ಕೆ)

# ಸಾಹಿತ್ಯದಲ್ಲಿ ಶೈಲಿ

✍ ವಾಸುದೇವ ಕಾಣೆಮಾರ್

ಸಾಹಿತ್ಯದ ಜಿಜ್ಞಾಸೆ ಮಾಡುತ್ತಿರುವಾಗ ಅನೇಕ ಸಿದ್ಧಾಂತಗಳು ಉಪಲಬ್ಧವಾಗುತ್ತವೆ. ಕಾವ್ಯ ಶಾಸ್ತ್ರರೀತ್ಯಾ ವಿಮರ್ಶೆ ಮಾಡುವಾಗ ಕೃತಿಕಾರ ಸಾಹಿತಿಯ ಅನೇಕ ಗುಣಗಳು ಕಾಣಿಸುತ್ತವೆ. ಇವೆಲ್ಲ ಒದಗುವಾಗ ಸಾಹಿತಿಯ ಬರೆಹದ ರೀತಿ ಒರೆಗಲ್ಲಿಗೆ ಹಾಕಿದಾಗ ಅವನ ಶೈಲಿಯೊಂದು ಪ್ರತೀಕವಿದೆ, ಅದರಲ್ಲಿ ಕಂಡುಬರುವ ಅಂಶಗಳು ಹೇಗಿದ್ದರೂ ಇರಲಿ, ಆ ಶೈಲಿಯದೇ ಸೊಗಸು ಎನ್ನುವ ಭಾವವೊಂದು ಇತ್ತೀಚೆಗೆ ಕಂಡುಬರುತ್ತದೆ. ಕೃತಿಕಾರನಂತೆ ಶೈಲಿ (Style is the man) ಇರುತ್ತದೆ.

ಶೈಲಿಯೆಂದರೆ ಜೀವನದ ಯಾವ ವ್ಯವಹಾರಕ್ಕೂ ಬಳಸಿಕೊಳ್ಳಲಾಗುವ ವ್ಯಕ್ತಿ ವಿಶಿಷ್ಟ ಕಲೆಯೆಂದು ಬಿಡಬಹುದು. ಸಾಹಿತ್ಯದಲ್ಲೊಂದೇ ಶೈಲಿಯಲ್ಲ; ಉಣ್ಣಲು ಕುಡಿಯಲು ಸುಧಾರಿತ ಶೈಲಿಗಳಿವೆ. ಉಡುಗೆ ತೊಡುಗೆಯ ಶೈಲಿ ಕೈನಡೆಗಳ ಶೈಲಿ, ಕ್ರೀಡಿಸುವ ಶೈಲಿ. ಓದು ಬರೆಹ ಸಂಪರ್ಕಗಳ ಶೈಲಿ, ರಾಜಕೀಯ ಶೈಲಿ, ಮನೆ ಕಟ್ಟುವ ಶೈಲಿ ಇತ್ಯಾದಿ ಅಸಂಖ್ಯ ಶೈಲಿಗಳಿವೆ. ಇವುಗಳೆಲ್ಲ ಕೃತಿಕಾರನನ್ನು ಚೆನ್ನಾಗಿ ಗಮನಿಸುವ ವ್ಯಕ್ತಿಗಳ ಅಭಿರುಚಿ, ಸಾಮರ್ಥ್ಯ ಮತ್ತು ಅವರ ನಡವಳಿಕೆಗಳಿಗೆ ತಕ್ಕಂತೆ ಕಾಣಿಸುತ್ತವೆ.

ಒಬ್ಬ ಸಾಹಿತಿಗೆ ಚಿಂತನೆ, ಶಬ್ದ ಸಂಪತ್ತಿ, ಭಾಷಾ ಪ್ರಭುತ್ವ ಸಾಕಷ್ಟಿದೆ, ಆದರೆ ಓದುಗರಿಗೆ ಬೇಕಾದಂತೆ ಅರ್ಥವಾ ಯೋಗ್ಯವಾಗಿ ಬರೆಯುವ ಶೈಲಿ ಸಿದ್ಧಿಸಿಲ್ಲವೆಂದಾಗ ಆತನು ಉತ್ತಮ ಲೇಖಕರ ಸಾಲಿನಲ್ಲಿ ಬರಲಾರ. ಒಂದೋ ಅವನು ತನ್ನ ಹಿಂದಿನ ಪ್ರಮುಖ ಲೇಖಕರ ಶೈಲಿಗಳನ್ನು ಅನುಸರಿಸಬೇಕು, ಇಲ್ಲವೆ ತನ್ನದೇ ಪ್ರತಿಭೆಯಿಂದೊಂದು ಅಪೂರ್ವ ಶೈಲಿ ಹಾಕಿಕೊಡಬೇಕು. ತನ್ನ ಭಾವನ್ನು ತನ್ನ ಲೇಖನವಲ್ಲಿ ಮೂಡಿಸಬೇಕಾದರೆ ಆತ ತನ್ನ ಬರವಣಿಗೆಯ ಅಭ್ಯಾಸದಲ್ಲಿ ಪಳಗಿರಬೇಕು ಎಂದು ಎಲ್ಲರೂ ಎನ್ನುತ್ತಾರೆ.

ಶೈಲಿಯು ಒಬ್ಬನ ಭಾವನೆಯು ಕೊಡಬಹುದಾದ ಫಲವನ್ನು ಪರಿಪೂರ್ಣವಿರುವಂತೆ ಒಟ್ಟಂದದಲ್ಲಿ ಕೊಡುವುದಕ್ಕೆ, ಅದಕ್ಕೆ ಅಗತ್ಯವಾದ ವಿಶೇಷ ಪರಿಕರಗಳನ್ನು ಕೂಡಿಸಿಕೊಡುವುದಾಗಿದೆ. ಒಬ್ಬನ ಶೈಲಿಯು ಹೇಗಿದ್ದರೂ ಅವನದೇ ಆಗಿ ಅನನ್ಯವಾಗುವಾಗ ಸುಂದರವೂ ಆಗಿರಬೇಕಾದ ಅವಶ್ಯಕತೆಯಿದೆ. ಅದು ಆತನ ಜನ್ಮಸಿದ್ಧಿ ಅನುಭವಗಳ ಅಭಿವ್ಯಕ್ತಿಗಳ ಉಡುಗೆಯಾಗಿ ತೊಡುಗೆಯಾಗಿಯೂ ಕೃತಿಗೆ ಒದಗಬೇಕು.

ಶೈಲಿಯು ಕ್ಷುದ್ರಕಲ್ಪನೆಯಿಂದಿರಬಾರದು. ಆಡಂಬರದ ಶಬ್ದಗಳಲ್ಲಿ ಪ್ರಕಟಿಸುವಂತಾಗಬಾರದು. ಅದಕ್ಕೊಂದು ಸಭ್ಯ ಅಲಂಕರಣ, ನೀತಿ ಮತ್ತು ವ್ಯವಸ್ಥೆ ಬೇಕು. ಶಬ್ದಗಳಿಂದ ಬಿಗಿ ಅಥವಾ ಲಘು ಸ್ಥೈಲಿ ಎರಡೂ ಅಲ್ಲ, ಶೈಲಿ ಸರಾವಾಗಿ ಹರಿಯಬೇಕು.

ಕಾವ್ಯದ ವಸ್ತುವು ಒಂದು ಶಿಲಾಖಂಡವಾದರೆ ಕಾವ್ಯಶೈಲಿಯು ಅದರಲ್ಲಿ ವಿಗ್ರಹದ ಆ ಕೃತಿಯನ್ನು ಮುದ್ದಾಗಿ ಪ್ರದರ್ಶಿಸುವ ಅದರ ಮೈಗೆ ಮೆತ್ತಿದ ಪಾಲಿಶ್ ಆವರಣವಿರುವಂತಿದೆ. ಆದರೆ ಬಟ್ಟೆ ಬರೆಯನ್ನು ಬೇಡದಿದ್ದಾಗ ಕಳಚಿಬಿಡುವಂತೆ ಸೂಕ್ತಶೈಲಿ ಬೇಡವೆಂದು ಲೇಖಕನೊಬ್ಬನು ಏನನ್ನಾದರೂ ಲಿಖಿಸಬಹುದು ಎಂದರೆ ಅದು ಕೂಡದು ಎನ್ನುತ್ತಾರೆ ಜನ ! ಕವಿಗೂ ಹಾಗೆಯೇ ಅನ್ನಿಸುತ್ತದೆ.

ಕಾಳಿದಾಸನಂತೆ, ಷೇಕ್ಸ್‌ಪಿಯರನಂತೆ ಪ್ರಸಿದ್ಧ ಕಾವ್ಯರಚಿಸಲು ಯಾರು ತಾನೇ ಬಯಸುವುದಿಲ್ಲ? ಆದರೆ ಅಂಥವರ ಶೈಲಿಯ ಅನುಕರಣೆ ಹೆಚ್ಚಿಗೆ ಸಾಧ್ಯವಿಲ್ಲ, ಅದು ಅವರವರಿಗೇ ಸಾಧ್ಯವೆಂಬುದು ಸಹಜ. ಬೇರೆ ಯಾರಲ್ಲೂ ಆ ಒಳ್ಳೆಯ ಕವಿಗಳ ವ್ಯಕ್ತಿಮಾತ್ರೆಯ ಛಾಪು ಕೃತಿಗಳಲ್ಲಿ ಕಾಣಿಸದು. ಶೈಲಿಯು ಲೇಖಕನ ಅಂಗಿಯಲ್ಲ, ತೊಗಲು ಎಂದಿದ್ದಾನೆ. ಕಾರ್ಲೈಲ್ ಚರ್ಮವು ಹೇಗೆ ಜೀವಿಗೆ ಅವರ್ಜನೀಯವಾದ ಒಂದು ಭಾಗವೋ ಲೇಖಕನೊಬ್ಬನಿಗೆ ಅವನ ಶೈಲಿಯು ಅದರಂತೆಯೇ. ಒಬ್ಬ ಲೇಖಕನ ಸೊತ್ತು ಇನ್ನೊಬ್ಬನದಾಗಲಾರದು.

ಶೈಲಿಯನ್ನು ಲೇಖಕನೊಬ್ಬ ಇತರರಿಂದ ಅಷ್ಟಿಷ್ಟು ಎರವು ಪಡೆದು, ತನ್ನ ದಾಗಿಸಲು ಸ್ವಲ್ಪ ಬದಲಿಸಿ ಓದುಗನಿಗೆ ಕೊಡುತ್ತಾನೆ. ಇದರಿಂದಾಗಿ ಕೆಲವು ಸಲ ಲೇಖಕನಲ್ಲಿ ಬೇರೊಬ್ಬರ ಮುಖವಾಡ ಚರ್ಯೆ ಹಾಕಿಕೊಂಡದ್ದು ಕಾಣಿಸದೆ ಇರುವುದಿಲ್ಲ.

ನಿಜವಾದ ಶೈಲಿಯು ಕೃತಿಕಾರನ ಅನುಭವಗಳು ಘನಗೊಂಡದ್ದಾಗಬೇಕು. ಒಬ್ಬ ಮನುಷ್ಯನನ್ನು ಬಹಳ ಚೆನ್ನಾಗಿ ತೋರಿಸುವುದು ಅವನ ಮಾತು. ಯಾವ ಕೃತಿಯೂ ಮನುಷ್ಯನ ಮನಸ್ಸು, ಬುದ್ಧಿ ಮತ್ತು ಅಂತಃ ಸ್ವರೂಪವನ್ನು ಅವನ ಮಾತುಗಾರಿಕೆಯಲ್ಲಿರುವಂತಲ್ಲದೆ ಬೇರೆ ರೀತಿಯಲ್ಲಿ ಸ್ಪಷ್ಟಪಡಿಸಲಾರದು. ಅದು ಅವನ ವ್ಯಕ್ತಿತ್ವದ ವಿಶ್ವಾಸಾರ್ಹ ಸೂಚನೆ. ಅದು ಇತರರನ್ನು ಪ್ರಭಾವಗೊಳಿಸುತ್ತದೆ. ಸ್ವೀಕಾರಾರ್ಹವೂ ಆಗುತ್ತದೆ.

ಕವಿಯ ಕುಲ, ಬಲ, ಛಲ, ಬಾಳ ಸ್ಥಿತಿ, ಗತಿ, ವ್ಯಾಸಂಗ, ವ್ಯವಹಾರ, ಪರಿಣತಿ ಮೊದಲಾದವುಗಳ ಪ್ರೇರಣೆಯಿಂದ ಕೃತಿಯು ಜೀವಭಾವ ತೋರಿಸಿಕೊಡುವುದು ಕವಿಯ ಕುಶಲಕರ್ಮವಾದ ಕಾವ್ಯವು ಕವಿಯಿಂದ ಪ್ರತ್ಯೇಕವಾಗಿರಲಾರದು.

ಆದರೆ ಅತಿ ಹೆಚ್ಚಿನ ಅಂಶದಲ್ಲಿ ಸಾಹಿತಿಗಳು ತಮ್ಮ ನೈಜ ಶೈಲಿಯನ್ನು ತೋರಿಸದೆ ತಮ್ಮ ಕಾಲದ ಗ್ರಂಥ ರಚನೆಯ ಶೈಲಿಯ ರಾಜಮಾರ್ಗವನ್ನು ತುಳಿಯುತ್ತಿರುವರು. ಅಲ್ಲಿ ಅವರ ವ್ಯಕ್ತಿತ್ವವು ನಾಸ್ತಿಯೆಂಬಂತೆಯೇ ತೋರುವುದು. ಆ ಗ್ರಾಂಥಿಕ ಶೈಲಿಯ ಮೂಲಕರ್ತೃ ಅಥವಾ ಕರ್ತೃಗಳ ಶೈಲಿಯು ಮಾತ್ರ ಸಮಾಂತವಿದೆ. ಉದಾಹರಣೆಗೆ ಎಷ್ಟೋ ಪುರಾಣಿಕರು ವಾಲ್ಮೀಕಿ ವ್ಯಾಸರಿಗೆ ಋಣಿಗಳಾಗಿರುತ್ತಾರೆ. ಮತ್ತು ಎಷ್ಟೋ ಧರ್ಮಜಿಜ್ಞಾಸುಗಳು ಸಂಸ್ಕೃತಿವೇತ್ತರೂ ವೇದೋಪನಿಷತ್ತುಗಳಿಗೆ ಋಣಿಗಳಾಗಿದ್ದಾರೆ. ಆದರೆ ಅವುಗಳ ಮೂಲ ಕವಿಗಳಿಗೆ ಆ ಗ್ರಾಂಥಿಕ ಶೈಲಿಯು ಮತ್ತು ಪರಿಕರಗಳ ಸಂಬಂಧವಿರುವಂತೆ ಬೇರೆ ನಕಲಿಕವಿಗಳಿಗೆ ಇರುವುದಿಲ್ಲ.

ಪರರ ಶೈಲಿಯನ್ನು ಅನುಕರಿಸುವುದು ಹೀನವಾದ ಅಣಕ ಸಾಹಿತ್ಯವೆನಿಸುತ್ತದೆ. ಆದರೂ ಸ್ವತಂತ್ರವಾಗಿರಲು ಬಯಸುವ ಲೇಖಕನಿಗೆ ಅವೂ ಬೇಕು. ಅವನದು ಒಂದು ಮಿಶ್ರಾ ಶೈಲಿಯಂತೆನಿಸದೆ ಒಂದು ನೂತನ ರಾಸಾಯನಿಕ ಸಂಯುಕ್ತ ಶೈಲಿ ಸಿದ್ಧಿಸಿದರೆ ಒಳ್ಳೆಯದೇ.

ಕವಿಗಳಲ್ಲಿ ಪ್ರತಿಯೊಬ್ಬನೂ ಕಾವ್ಯವಸ್ತುವಿನಲ್ಲಿ ತನಗೆ ಬೇಡವಾದ ಅಂಶಗಳನ್ನು ತಿರಸ್ಕರಿಸಿ, ಹೊಸ ಅಂಶಗಳನ್ನು ಸೇರಿಸಿ, ಹಳೆ ಅಂಶಗಳಲ್ಲಿ ಕೆಲವನ್ನಷ್ಟೇ ಇರಿಸಿಕೊಂಡು ತನ್ನ ಕಾವ್ಯವನ್ನು ಕಟ್ಟುತ್ತಾನೆ. ಆಗ ಅವನಿಗೊಂದು ಶೈಲಿಪ್ರಕಾರವು ಹೇಗೋ ಸಿದ್ಧಿಸುತ್ತದೆ. ಉದಾಹರಣೆಗೆ ಭಾಸಕವಿಯು ತನ್ನೊಂದು ನಾಟಕದಲ್ಲಿ ಪಾಂಡವ - ಕೌರವರಿಗೆ ಒಪ್ಪಂದವನ್ನುಂಟು ಮಾಡಿ ಭಾರತ ಯುದ್ಧವೇ ನಡೆಯದಂತೆ ನಿರೂಪಿಸಿದ್ದಾನೆ. ಬೆರಗುಗೊಳಿಸಿದ್ದಾನೆ. ಪಂಪನಿಗೆ ಭಾರತದ ನಾಯಕನು ಅರ್ಜುನನಾಗಿ, ರನ್ನನಿಗೆ ಭೀಮನಾಗಿ ಕುಮಾರವ್ಯಾಸನಿಗೆ ಕೃಷ್ಣನಾಗಿ ಆ ಪಾತ್ರಗಳು ಒಂದೊಂದು ಕಾವ್ಯವಸ್ತುವಿನ ಬೀಜವನ್ನು ಪ್ರತ್ಯೇಕವಾಗಿ ತಮ್ಮ ಶೈಲಿಗಳಲ್ಲಿ ಫಲಿಸಿಕೊಂಡರು.

ಕವಿ ತನಗೆ ಬೇಕಾದ ಕಾವ್ಯ ರೀತಿಯನ್ನೂ ಆರಿಸಿಕೊಳ್ಳುತ್ತಾನೆ. ಹರಿಹರನು ಮೊದಲಿಗೆ ರಗಳೆಗಳ ಮಾಧ್ಯಮವನ್ನು, ರಾಘವಾಂಕನು ಷಟ್ಪದಿ ಪ್ರಕಾರವನ್ನು, ರತ್ನಾಕರವರ್ಣಿಯು ಸಂಗತ್ಯವನ್ನು ಸರ್ವಜ್ಞನು ಚಿಕ್ಕ ವಚನಗಳಿಗೆ ತ್ರಿಪದಿಯನ್ನೂ ಆರಿಸಿಕೊಂಡು ಅದರಲ್ಲಿ ತಮ್ಮ ಪರಿಣತಿಯ ಭಾವನ್ನು

ಮುಳುಗಿಹೋಗಿದ್ದಾರೆ. ಪಂಪ - ಕುಮಾರವ್ಯಾಸರದು ತಮ್ಮ ಕಥಾಸರಣಿಯ ಮೇಲೆ ನೆಟ್ಟ ಮನಸ್ಸು, ಜನ್ನನದು ವಿಚಿಕಿತ್ಸಕಾಬುದ್ಧಿ ಕೋರಿದ್ದಾರೆ. ರನ್ನ ಲಕ್ಷ್ಮೀಶರು ನಾದಲೋಲರು ರನ್ನನದು ವೀರ್ಯವತ್ತಾದ ಶೈಲಿಯುದ್ದು ರುದ್ರ ನಾಟಕಕ್ಕೆ ಸುಸಜ್ಜಿತವಾದುದು. ಹರಿಹರನದು ಉನ್ನತ ಆವೇಶ, ರಾಘವಾಂಕನದು ಕರ್ತ ಪ್ರತಿಭೆ,' ರತ್ನಾಕರನದು ಅವಿಶ್ರಾಂತ ಸರಳತೆ, ಸರ್ವಜ್ಞನದು ಗ್ರಾಮ್ಯತೆ, ನಾರಣಪ್ಪನು ರೂಪಲಂಕಾರದ ಮುಖಾಂತರ ಮಾತಾಡುವ ಸ್ವಭಾವವುಳ್ಳವನು ಹೀಗೆ ವೈವಿಧ್ಯ.

ಹಳೆ ಗನ್ನಡದ ಅನೇಕ ಕವಿಗಳಲ್ಲಿ ತಮ್ಮ ಮಾತುಗಳನ್ನೇ ಸಮರ್ಥಿಸುತ್ತ ಪುನರುಕ್ತಿ ಮಾಡುವ ಒಂದು ಪದ್ಧತಿಯಿದೆ. ಶ್ವಾಸ ಹೋದರೂ ಪ್ರಾಸ ಹೋಗಕೂಡದು ಎನ್ನುವವರಿದ್ದಾರು? ಅನೇಕ ಕವಿಗಳು ಆವಶ್ಯಕತೆಯಿಲ್ಲದೆ ಅರ್ಥವಿಲ್ಲದ ಕೇವಲ ದನಿಯ ವ್ಯಾಮೋಹದಿಂದ ದ್ವಿತೀಯಾಕ್ಷರ ಪ್ರಾಸ ತೊಡಗಿಸಿದ್ದಾರೆ (ಆದರೆ ನಾರಣಪ್ಪನು ಯಾವುದೇ ಪ್ರಯಾಸಗಳನ್ನೆಲ್ಲ ಬಳಸಿರುವುದುಂಟು. ಆದರೆ ಲಕ್ಷ್ಮೀಶನು ಹಾಗೇ ಮಾಡಿದರೂ ಅರ್ಥಸಂಪತ್ತಿ ಹೆಚ್ಚಿಸಿದ್ದಾನೆ.)

ಹಳೆಗನ್ನಡ ಕವಿಗಳು ತಮ್ಮ ಅರಸರ ಮೂಢ ಭಕ್ತಿ, ತಮ್ಮ ಕುಲದಲ್ಲಿ ದುರಭಿಮಾನ, ಕವಿ ಸಂಕೇತಗಳಲ್ಲಿ ಕುರುಡುಶ್ರದ್ಧೆ ಇಂತಹವುಗಳ ಕತ್ತಲೆಯಲ್ಲಿ ಸಿಲುಕಿ ತೊಳಲುತ್ತಿದ್ದರು. ಆದರೂ ಅವರ ವರ್ಣನಾ ಪದ್ಧತಿಗಳು ಬೇರೆಬೇರೆಯಾಗಿ ವಿಶಿಷ್ಟವಾಗಿದೆ. ಉದಾಹರಣೆಗೆ ನಾರಣಪ್ಪನ ವರ್ಣನೆಯಲ್ಲಿ ಪದಾರ್ಥದ ಸ್ವಂತ ಪರಿಚಯ. ಅನುಭವದ ಮೇಲೆ ಕಟ್ಟಿದ ಬುದ್ಧಿ, ಸತ್ಯವನ್ನು ಸಾಧಿಸುವ ಪ್ರತಿಭೆ ಮತ್ತು ಲಲಿತಪದ - ಸಂಪತ್ತಿ ಇವು ಅದು ಸರ್ವಾಂಗಣಸುಂದರವಿದೆ. ರನ್ನನಲ್ಲಿ ಪದಬಾಹುಳ್ಯವಿಲ್ಲ, ಮತ್ತು ಸ್ಪಷ್ಟತೆಗೆ ಸಹಾಯಕವಾದ ನೇರತೆಯು ಅವನ ಗುಣವಾಗಿದೆ. ರಾಘವಾಂಕನಲ್ಲಿ ಔಚಿತ್ಯ, ವಾತ್ಸಲ್ಯಗಳ ಮನೋಧರ್ಮವಿರುವುದಾದರೂ ಸಮಭಾಷಣೆ ಕೊಡುವಾಗ ಅದರಲ್ಲಿ ವಾದ ವೈಷಮ್ಯ ಕಾಣಿಸುತ್ತಿದ್ದ. ಪಂಪನ ಶೈಲಿಯಲ್ಲಂತೂ ವರ್ಗಗಳ ಮಾತಾಡುವ ಮಾತಿನ ಸರಣಿ ಇದ್ದು ಓಜಸ್ಸಿ ಶೈಲಿಯು ಅಸಾಧಾರಣವಿದ್ದು ಅವನ ಭಾಷೆಯಲ್ಲಿ ಸಂಸ್ಕೃತದ ಪ್ರಭಾವವಿದ್ದರೂ ಕನ್ನಡದ್ದೇ ಮೇಲುಗಳು. ಅವನದು 'ನಿಚ್ಚಂ ಪೊಸತಾರ್ಣವ'ವೆಂಬಂತೆ ಗಂಭೀರಕವಿತ್ವ. ಅವನಲ್ಲಿ ತಂಪು, ಸುಭಗತ್ವ, ಅದ್ಭುತವಚನ, ವಾಗ್ವಿಭವೋನ್ನತಿ ಇರುವುದೊಂದು ಅವನ ಮತ್ತು ಮುಂದಿನ ಶತಮಾನದ ಕವಿಗಳೆಲ್ಲ ಸಮರ್ಥಿಸಿದ್ದಾರೆ. ಇನ್ನು ನಾರಣಪ್ಪ, ಲಕ್ಷ್ಮೀಶರಂತವರೆಲ್ಲ ಬಹುವೈವಿಧ್ಯವನ್ನು ತಮ್ಮ ಶೈಲಿಯಲ್ಲಿ ತೋರಿಸಿಕೊಟ್ಟಿದ್ದಾರೆ. ಎಲ್ಲೆಲ್ಲೂ ಕವಿಗಳ ಪೂರ್ವ ಲವಲವಿಕೆ ಕಾಣಿಸುತ್ತದೆ. ಇದೆಲ್ಲ ನಮ್ಮ ಸಾಹಿತ್ಯ ಪರಂಪರೆಯ ಶೈಲಿಯಮಾತಾಯಿತು.

ಕೆಲವು ಕವಿಗಳಿಗೆ ಶಬ್ದಕೋಶವೊಂದೇ ಸಾಧನ. ಅವರ ಮನಸ್ಸಿನಲ್ಲಿ ಮೊದಲಿಗೆ ಕಲ್ಪನೆ ಆವಿರ್ಭವಿಸಿತೆ, ತರುವಾಯ ಅದಕ್ಕೆ ತಕ್ಕ ಶಬ್ದಗಳನ್ನು ಹೊಂದಿಸಲಾಯಿತೆ ಎಂಬ ತರ್ಕದ ನೋಟವಿರುತ್ತದೆ. ಭಾವನೋಜಂ ಭಾಷೆಯ ಸಂಪರ್ಕವಿಲ್ಲದೆ. ತಮ್ಮದೇ ಆದ ಯಾವುದೋ ಒಂದು ರೂಪಿನಲ್ಲಿ ಜನಿಸಿಬರುವುದು ಸಾಧ್ಯವಿಲ್ಲವಾದರೂ ಕವಿಯ ಅಂತರ್ಯದಲ್ಲಿ ಕೃತಿಯ ಆಕೃತಿಯು ಮುಸುಕಾಗಿ ಕಾಣಿಸಿದ್ದುಂಟು. ಮುಂದೆ ಸ್ಪಷ್ಟವಾಗಿ ಬರಬೇಕಾದರೆ ಭಾವ ಮತ್ತು ಭಾಷೆಗಳೆರಡೂ ಯೋಗ್ಯವಾಗಿ ಸಂಘಟಿಸಬೇಕೆಂಬುದು ಸತ್ಯ.

ವಸ್ತು ಮತ್ತು ಶೈಲಿಗಳನ್ನು ಬೇರ್ಪಡಿಸಿ ಬರೆಯುವುದು ಅಸಾಧ್ಯ. ಕವಿಯ ಮನಸ್ಸಿನಲ್ಲಿ ಮಾತಿನಿಂದ ನಿರೂಪಿಸಲಾಗದ ಒಂದು ಯೋಚನೆ, ಒಂದು ಕೌತುಕ ಮತ್ತು ಒಂದು ಸೌಂದರ್ಯದ ಕಾಣ್ಕೆ ಉಳಿದೆ ಉಳಿಯುತ್ತದೆ. ಕಾವ್ಯದ ಸಾರವನ್ನಾದರೂ ಕೂಲಂಕಷವಾಗಿ ಬರಿಸುವ ಜವಾಬ್ದಾರಿ ಆತನಿಗಿದೆ. ಆ ಚಾತುರ್ಯದಿಂದ ಆತನ ಶೈಲಿಯಲ್ಲಿ ಬೆಡಗು, ವೈಚಿತ್ರ್ಯ ಬರುತ್ತವೆ.

ದೇಶ ಕಾಲ ಸಂದರ್ಭಗಳು ಸಾಹಿತ್ಯಶೈಲಿಯ ಮೇಲೆ ತಮ್ಮ ಅಚ್ಚನ್ನು ಒತ್ತಿರುತ್ತವೆ. ಪಾಶ್ಚಾತ್ಯ ದೇಶದಲ್ಲಿ ರಾಷ್ಟ್ರಪ್ರೇಮ, ಪೌರ್ವಾತ್ಯ ದೇಶದಲ್ಲಿ ಸಂಸ್ಕೃತಿ ಪ್ರೇಮ. ಒಂದರಲ್ಲಿ ಯುದ್ಧ - ಸಾವು - ದ್ವೇಷ - ಸ್ವಾರ್ಥಗಳ ಒತ್ತಡ ; ಇನ್ನೊಂದರಲ್ಲಿ ಶಾಂತಿ ಅಮೃತತತ್ವ. ಸ್ನೇಹ ತ್ಯಾಗಗಳ ಒಟ್ಟಂದ. ಒಂದೆಡೆ ಸ್ವಭಾವೋಕ್ತಿ ಅಲಂಕಾರಗಳ ಕಡೆಗೆ ಒಲವು, ಇನ್ನೊಂದೆಡೆ ಪರಮಾರ್ಥದ ಉತ್ಪ್ರೇಕಾಲಮಕಾರದ ಕಡೆ ಒಲವು. ಇನ್ನು ಷೇಕ್ಸ್‌ಪಿಯರ್ 16ರ ಬದಲು 19ನೆ ಶತಮಾನದಲ್ಲಿದ್ದರೆ. ನಾಟಕಗಳ ಬದಲಿಗೆ ಮಹಾಕಾವ್ಯಗಳನ್ನು ರಚಿಸುತ್ತಿದ್ದನೇನೊ, 20ನೆ ಶತಮಾನದಲ್ಲಿ ಗದ್ಯ ಲೇಖಕನಾಗುತ್ತಿದ್ದನೇನೊ ಕಾಲಧರ್ಮದಂತೆ ಎಂದೆನ್ನಿಸುತ್ತದೆ. ನಮಗೆ ಒಂದೇ ತಲೆಮಾರಿನ ಗದ್ಯಪದ್ಯಲೇಖಕರಲ್ಲಿ ಒಂದೇ ತರಹದ ಖ್ಯಾತಿಲಕ್ಷಣವು ಕಂಡುಬರುವುದುಂಟು.

ಕೆಲವು ಉಬ್ಬಿದರೂ ಒಳಗೆ ಟೊಳ್ಳಾದ ಅತಿಮಾತಿನ ಬೇಸರದ ಶೈಲಿ (ಷಡಕ್ಷರಿ, ರುದ್ರಭಟ್ಟರದಲ್ಲಿರುವಂತೆ. ಆದರೂ ಒಳ್ಳೆಯ ಶಬ್ದಗುಂಫನ, ವಾಕ್ಯರಚನೆಗಳು ಅಲ್ಲೂ ಇರುವುದು) ಇನ್ನು ಕೆಲವು ಸುರಸ. ಕೆಲವು ಪರಿಶುದ್ಧ. ಕೆಲವು ಸಂಯಮ ಪೂರ್ಣ, ಕೆಲವು ಅಂಗಾಂಗ ಸೌಷ್ಠವವುಳ್ಳದ್ದು. ಕೆಲವು ಕಾಲಾತೀತ (Classical) ಕೆಲವು ರಮ್ಯ (Ramanik) -- ಹೀಗೆ ಶೈಲಿಗಳಲ್ಲಿ ಅನೇಕ ಪ್ರಕಾರಗಳಿವೆ. ಹಾಗಾಗಿ ಮಹಾಶೈಲಿಯೆಂಬುದು ಮೊಲದ ಕೋಡಿನಂತೆ ಸುಳ್ಳುಮಾತಾಗಿರುವುದು ಎಂದೆನ್ನಬಹುದು. •

## ಭಾರತೀಯ ಕಲೆ

(ಪುಟ 7ರಿಂದ)

ಅವರ ಕೆಳಗೆ ರಾಜದರ್ಬಾರಿಗಳು ಸಾಲಾಗಿ ಆಸೀನರಾಗಿದ್ದಾರೆ. ವಾತಾವರಣವು ಭಾವಹೀನ ಹಾಗೂ ಪ್ರಶಾಂತವಾಗಿದೆ. ಅರಮನೆಯ ಬಳಿಯ ವಾಸ್ತುಶಿಲ್ಪದ ಹಿನ್ನೆಲೆಗೆ ಹಳದಿ, ಕೆಂಪು ಹಾಗೂ ಕೇಸರಿ ಬಣ್ಣಗಳ ಬಳಕೆ ವೈವಿಧ್ಯತೆಯನ್ನು ತಂದು ಕೊಡುತ್ತದೆ.

ಹದಿನೆಂಟನೆ ಶತಮಾನದ ನಂತರದ ಕಾಲದಲ್ಲಿ ರಾಜಪೂತ ಹಾಗೂ ಮೊಗಲ ಶೈಲಿಯನ್ನು ಚೆನ್ನಾಗಿ ಒಂದುಗೂಡಿ ಗುಲೇರ ಪ್ರೌಢ ಶೈಲಿಯು ಉದ್ಭವವಾಯಿತು. ಈ ರೀತಿಯ ಶೈಲಿಯ ಅತ್ಯುತ್ತಮ ಉದಾಹರಣೆಗೆ 'ಅಗಲಿಕೆಯ' ದುಃಖ ಹಾಗೂ 'ದಿವ್ಯ ಜೋಡಿ'. ಈ ಚಿತ್ರದಲ್ಲಿ ಉದ್ದನೆಯ ಬಿಳಿಯ ಬಟ್ಟೆ ಹಾಗೂ ಕೆಂಪು ದಾವಣಿತೊಟ್ಟ ಸುಂದರ ಮಹಿಳೆ ಕೈಯಲ್ಲಿರುವ ಸಂಗೀತ ವಾದ್ಯವನ್ನು ಮೀಟುತ್ತಿದ್ದಾಳೆ. ಅವಳ ಬಗ್ಗಿದ ಕೈಗಳ ಪ್ರತಿಧ್ವನಿಯನ್ನು ಅವಳ ಹಿಂದಿರುವ ಮರ ಸುಂದರವಾಗಿ ಬಗ್ಗಿದ ಶಾಖೆಗಳಲ್ಲಿ ಕಾಣಬಹುದಾಗಿದೆ. ಒಂದು ಮನೋಹರ ಕಪ್ಪು ಜಿಂಕೆಯು ಅವಳ ಸಂಗೀತವನ್ನು ತಲ್ಲೀನನಗೊಂಡು ಕೇಳುತ್ತಿದ್ದ. ಈ ಎರಡೂ ಚಿತ್ರಗಳ ಹಿನ್ನೆಲೆಯಾಗಿ ಕೆಳಗೆ ದಟ್ಟ ಹಸಿರು ಬಣ್ಣ, ಚಿತ್ರದ ಮಧ್ಯಕ್ಕೆ ಬರುತ್ತಿದ್ದಂತೆ ದಟ್ಟ ಹಳದಿಯಾಗುತ್ತ ಮೇಲೆ ಬಿಳಿಯ ಆಕಾಶದ ಪಟ್ಟಿಯಿದೆ. ಸಂಯೋಜನೆ ಸರಳವಾಗಿದ್ದು, ಕೆಲವು ಬಣ್ಣಗಳ ಬಳಕೆ ಇದೆಲ್ಲವೂ ನುರಿತ ಕುಂಚದಲ್ಲಿ ಒಂದು ದಿವ್ಯ ಮಾಂತ್ರಿಕೆಯಾಗಿ ಪರಿವರ್ತನೆಗೊಂಡಿದೆ.

'ದಿವ್ಯ ಜೋಡಿ' ಇನ್ನೊಂದು ಸರಳ ಸಂಯೋಜನೆಯನ್ನು ಹೊಂದಿರುವ ಚಿತ್ರ, ಕೃಷ್ಣನ ಕೊಳಲಿನ ಸಂಗೀತದಿಂದ ಸೂರೆಗೊಂಡ ರಾಧ ಭಾವಪರವಶಳಾಗಿ ಆತನತ್ತ ನೋಡುತ್ತಿದ್ದಾಳೆ. ಆ ಕ್ಷಣದ ಮಾಂತ್ರಿಕತೆಯನ್ನು ಚಿತ್ರ ಹಿಡಿದಿಡುತ್ತದೆ. ಕುಣಿಯುತ್ತಿರುವ ಗೊಲ್ಲರ ಮಧ್ಯೆ ಹಳದಿ ಧೋತಿಯುಟ್ಟು ಕೃಷ್ಣ ಹಾಗೂ ಕೇಸರಿ ಉದ್ದನೆಯ ಲಂಗ ತೊಟ್ಟ ರಾಧೆ ಎದ್ದು ಕಾಣುತ್ತಾಳೆ. ಹಸಿರಾಗಿರುವ ಭೂಪ್ರದೇಶವು ಅವರ ಹಿಂದೆ ಮೇಲಕ್ಕೆ ಹರಡಿದೆ. ಅವರ ಮೇಲೆ ಮರವೊಂದು ತನ್ನ ದಟ್ಟ ಎಲೆಗಳೊಂದಿಗೆ ಶಾಖೆಗಳನ್ನು ಹರಡಿದ್ದರೆ, ಆದರೆ ಕೆಳಗೆ ಸದ್ದಿಲ್ಲದೆ ಹೊಳೆಯೊಂದು ಹರಿಯುತ್ತಿದೆ.

ಕೃಪೆ : ಎನ್. ಮರಿಶಾಮಾಚಾರ್‌ರವರ ಭಾರತೀಯ ಕಲೆ

(ಮುಂದುವರಿಯುವುದು)

# KARNATAKA'S CONTRIBUTION TO INDIAN BHAKTI MOVEMENT

**On 27th & 28th of October, the Mysore Association, Bombay held a two day festival called Bhakti Sangam comprising of lectures and concerts on contribution of the saints from Karnataka & Maharashtra of the Indian Bhakti Movement. Prof. Vasantha Kushtaji,, who has conducted extensive research on Dasa Sahitya spoke on the contribution of the saints from Karnataka. We bring to the readers of Nesaru the second part of his lecture.**

● **Prof. Vasant Kushtagi**

*(...continued from last issue)*

Though Sharnas are fully considered the body and mind are sacred and pure, at the same time they are fully aware of the common human needs and problems which must be adequately meet with. But in their approach poverty is physical, not mental or spiritual. Therefore they brought the revolution, through which they uprooted the superstitions, exploitative and ritualistic practice, considered external opulence as superfluous and evaporative like a lamp exposed to the winds or the people gathered in a market place. Therefore, external or physical poverty is no indication of the spiritual or mental poverty. Basavanna for example considered the poor Sharnas are rich in their heart - in his words;

"Look at their hearts, they are poor
Look at their hearts, they are rich;
Look at their wealth, they are poor;
But they are richly endowed
with a great heart!
Kudala Sanga's Sharnas
are heroes without pluck!
Whom could I
Compare them to?

